"ಮಾಘ ಮಾಸ"

ಮಡಿಕೇರಿ ಗುಡ್ಡದ ಮೇಲೆ ನಿಂತು **ರಾಗ: ಶುದ್ಧಧನ್ಯಾಸಿ**

ಮಡಿಕೇರಿ ಗುಡ್ಡದ ಮೇಲೆ ನಿಂತು ನೋಡಿದಾಗ ಮಿತಿಮೀರಿ ಸಂತಸವು ಉಕ್ಕಿ ಉಕ್ಕಿ ಹರಿಯಲಾಗ॥ಪ॥ ಭಾವನಾಂತರಂಗವೆಲ್ಲ ಮನದಿ ಮೂಡಿದಾಗ ಇರದಿರದಾ ಮದವೇರಿ ತನ್ನ ತಾನೆ ಮರೆತಾಗ। ಪ್ರಕೃತಿ ದೇವಿ ಹಸಿರು ಸೀರೆ ಉಟ್ಟ ಅಟ್ಟಹಾಸ। ಮಿಂಚಿ ಮಾಯವಾಗುತಿತ್ತು ಒಂದು ಮಂದಹಾಸ॥1॥ ಚಳಿಯ ಗಾಳಿ ಮೈಯ್ಯ ಬಡಿಯುತ್ತಿತ್ತು ಮಾಘಮಾಸ। ಚಂದ್ರ ಕವಿಯ ಮಾತ ಕದ್ದು ಬಳಸಿದಂತ ಪ್ರಾಸ। ನಲಿವ ರಮಣಿ ಬಣ್ಣ ಬಣ್ಣ ರವಿಕೆ ತೊಟ್ಟ ನೋಟ॥2॥ ಹರೆಯುವತಿ ನಸುನಗುತ ನೃತ್ಯವಾಡಿದಾಟ। ಚಿಲುವೆ ಚಿಗುರ ಸ್ವರ್ಗಸೌಖ್ಯ ಕೊಡುವ ನಿನ್ನ। ಕೂಟ। ಪ್ರಕೃತಿ ದೇವಿ ತಲೆಯ ಬಾಚಿ ಹೂವ ಮುಡಿವ ಮಾಟ॥3॥ ದೇವಿ ನಿನ್ನ ರೂಪು ಸೊಬಗು ನೋಡಲೆನಿತೊ ಚಂದ। ಹಾವಿನಂತೆ ಸುರುಳಿ। ಪೋಪ ಮಾರ್ಗವೆನಿತೊ ಅಂದ ತಲೆಯ ತಿರುಗಿ। ಬೀಳುವಂಥ ಶಿಖರವೆನಿತೊ ಚಂದ ಕಣ್ಣುಕತ್ತಲಿಟ್ಟು ಬರುವ ರೂಪಕೂಪ ಅಂದ॥4॥

61. "ಮಾಧವ" ಮಾಸ ನಿಯಾಮಕ

ಮಾಧವ ಮಾಧವ ಸಾಧಕ ವಂದೇ। ಬಾಧಕ ಭೋಧಕ ಶುದ್ಧ ಸಮಾನೇ॥

ಮೂಕಂ ಕರೋತಿ ವಾಚಾಲಂಪಂಘುಂ ಲಂಘಯತೇ ಗಿರೀಮ್।
ಯತ್ಕೃಪಾತಮಹಂ ವಂದೇ ಪರಮಾನಂದ ಮಾಧವಂ॥

ಮಾಧವಾ ಮಾಧವಾ ಎಂದರೆ ಮಾಯಾದೇವಿ ಮಹಾಲಕ್ಷ್ಮೀದೇವಿಯವರಿಗೆ
ಅರಸನಾದುದರಿಂದ ಮಾಧವ ಎನಿಸಿಕೊಂಡ ॥ಕೇಶವಾಯ ನಮಃ॥

ಪ್ರಯಾಗ ನದಿಯಲ್ಲಿ ಮಾಧವನಿದ್ದಾನೆ ರಾಮರಾಮ। ಪ್ರಯಾಗ ನದಿಯಲಿ ಮಿಂದೆ
ಮಾಧವನ ದಯದಿ ರಾಮ ರಾಮ॥ ಕಾಶಿಯ ಹಾದಿಯಲಿ॥

ಮಾಧವ ಮಂಗಳಗಾತ್ರ। ಸ್ವಾಮಿ। ಯಾದವ ಕೈಲಾಸಮಿತ್ರ। ಮಹಿಮ ಕೇಳಿದರೆ ವಿಚಿತ್ರ। ನಿನ್ನ।
ಮನಮೆಚ್ಚಲಿ ಸತ್ಯಭಾಮ ಕಳತ್ರ॥ಅಚ್ಯುತಾನಂತ॥

ಶೋಧಿಸೆನ್ನ ಭವದ ಕಲುಷ ಭೋಧಿಸಯ್ಯ ಜ್ಞಾನವೆನಗೆ। ಭಾಧಿಸುವ ಯಮನ ಬಾಧೆ
ಬಿಡಿಸೋ ಮಾಧವ ॥ಈಶ ನಿನ್ನ॥

ಯಾಧವ ಕುಲದಲ್ಲಿ ಸಾಧುಗಳರಸನೆ। ಭೇಧಿಸಿ ದನುಜರ ಗೆಲಿದನೆ।
ಭೇಧಿಸಿ ದನುಜರ ಗೆಲಿದನೆ ಶ್ರೀ ಕೃಷ್ಣ। ಮಾಧವ ನಮ್ಮ ಮನೆದೈವ ॥ರಂಗಬಾರೋ॥

ಮಾಧವ ಜಯ ಮಾಧವ ಜಯ

ಮಾಧವ ಜಯ ಮಾಧವ ಜಯ। ಯಾದವ ಕುಲಮಣಿ ಭೂದೇವೀಪ್ರಿಯ॥ಪ॥ ವಿದ್ಯಾಧರಮುನಿ ಸದ್ಯೋಜಾತ ವಿರಿಂ। ಚಾದ್ಯರ್ಚಿತ ವೇದವೇದ್ಯ ಮುಕುಂದ॥1॥ ಸ್ವರ್ಣಗಿರೀಶ ಸುಪರ್ಣಗಮನ ವಿಶ್ವ। ನಿರ್ಣಯ ಶೀಲ ದಯಾರ್ಣವ ಪೂರ್ಣ॥2॥ಪುಣ್ಯ ಸತ್ಪುರುಷವರೇಣ್ಯ ಧನುಜ ಜನಾ। ರಣ್ಯಪಾವಕ ದೋಷ ಶೂನ್ಯ ಗುಣಾಂಕ॥3॥ ಕಠಿಣ ದಂಡಕ ದೇಶಾಟಣ ಸುಪ್ಲವಗ ಸಂ। ಘಟಣಾಹಿಫಣ ತಟನಟಣ ಶ್ರೀಮೂರ್ತೇ॥4॥ ಕಿಂಕರರಕ್ಷ ನಿಶ್ಶಂಕ ಸದಾದೇವ। ಸಂಕಟಹರ ಪ್ರಸನ್ವೆಂಕಟವರದ॥5॥

ಮಾಧವ ಗೋವಿಂದ ದೇವ

ಮಾಧವ ಗೋವಿಂದ ದೇವ ಮಾಧವ ಗೋವಿಂದ।।ಪ।। ಪಾದಭಕುತಿ ನೀಡೋ ದೇವ।।ಅ.ಪ.।। ಅನವರತವು ಮನದಿ ನಿನ್ನಯ। ಘನಮಹಿಮೆಗಳನ್ನು ಮೋದದಿ। ನೆನೆಯುವಂತೆ ಮಾಡೋ ದೇವ।।1।। ಅಭಿಮಾನವ ಬಿಡಿಸೋ ವಿಷಯದ। ಅಭಿಮಾನವ ಬಿಡಿಸೋ ನಿನ್ನ ಅಭಯಕರ ನೀಡೋ ದೇವ।।2।। ಎಂದಿಗು ಹೃದಯದಲಿ ರಾಗದ। ಗಂಧವು ಬರದಂತೆ ದೇವ. ಸುಂದರ ಗೋಪಾಲ ಎನ್ನ ಹೃನ್ಮಂದಿರದಲಿ ನಿಲ್ಲೋ ಪ್ರಸನ್ನ।।3।।

❖ ❖ ❖

62. ಮಾಘಗೌರಿ

ಗಿರಿರಾಜತನಯೆ ಬಾರೆ

ಗಿರಿರಾಜತನಯೆ ಬಾರೆ। ಸ್ವರ್ಣಪೀಠಕೆ ಬಾರೆ ಅಂಬ।।ಪ।। ಸಾರಸಾಕ್ಷಿಯರು ಸಾರಿ ಕರೆವರು। ವಾರಿಜಾಕ್ಷಿಯೆ ನಿನ್ನನುತಾಯೆ।। ಫಾಲನೇತ್ರನ ಪಾದ ಪದ್ಮವ। ಲೀಲೆಯಿಂದಲಿ ಭಜಿಸಿ ಮನದಿ ಕಾಲಕಾಲಕೆ ಮಾಲೆ ಹಾಕಿದಳು। ಶ್ರೀವರಗೌರಿ ತಾಯೆ ಅಂಬಾ।।1।। ಪರಮ ಮಂಗಳೆ ಪಾರ್ವತಿಯೆ। ಹರುಷದಿಂದ ಹರನ ಕೂಡುತ। ತ್ವರಿತದಿಂದ ದಯೆ ಮಾಡೆ। ಶ್ರೀವರಗೌರಿ ತಾಯೆ ಅಂಬಾ।।2।।

ಪೂಜೆ ಮಾಡೋಣ ಬಾರೆ

ರಾಗ: ಶಂಕರಾಭರಣ-ಆದಿತಾಳ

ಪೂಜೆ ಮಾಡೋಣ ಬಾರೆ। ರಾಜ ರಾಜೇಶ್ವರಿ ಗೌರಿಯ।।ಗೌರಿ।। ಇಂದಿನ ದಿನದಲ್ಲಿ ಸಖಿ ಬಂದಿಹ ಗೌರಿಯನು ಸಖಿ ಚಂದದಿಂದ ತಂದು ನಾವ್।।ಗೌರಿ।। ಮಲ್ಲಿಗೆ ಮಲ್ಲೆಗಳು ಸಖಿ ಮಂದಾರ ಪುಷ್ಪಗಳು ಸಖಿ ಚಂದದಿಂದ ತಂದು ನಾವ್।।ಗೌರಿ।। ಸಕ್ಕರೆ ಕ್ಷೀರಾ ಮಧು ಸಖಿ ಉಕ್ಕುವ ಕ್ಷೀರಾ ದಧಿ ಸಖಿ ಚಂದದಿಂದ ತಂದು ನಾವ್।।ಗೌರಿ।।

ಅಂಬೇ ಗೌರಿ ನಾರಾಯಣಿ

ರಾಗ: ಅಭೇರಿ

ಅಂಬೇ ಗೌರಿ ನಾರಾಯಣಿ ಜಗದಂಬೆ ಗೌರಿ ನಾರಾಯಣಿ। ಜಯ ಹಿಮಾಲಯ ಗಿರಿರಾಜ ನಂದಿನಿ। ಜಯ ಗಜವದನ ಷಣ್ಮುಖ ಜನನಿ ।।ಅಂಬೆ।। ಕನಕಾಂಬರ ಧಾರಿಣಿ ಶಿವಾ; ಕರತ್ರಿಶೂಲ ಮಹಿಷಾಸುರ ಮರ್ದಿನಿ। ಕೈಲಾಸಾಧೀಶನ ಅರ್ಧಾಂಗಿನಿ। ಕೋಟಿ ಸೂರ್ಯ ಇಂದು ದೀಪ್ತಿಗಾಮಿನಿ।।ಅಂಬೆ।। ಮಧುರ ಮನೋಹರ ಮಂಜುಳ ಕಾಯ। ಮದನ ದಹನ ಮನಮೋಹಿತ ಮಾಯಾ। ಮಾರ್ಕಂಡ್ಯಾದಿ ಮುನಿಸ್ತುತಿ ಗಾಯೆ। ಮಂಗಳ ಗೌರಿ ಮಹೇಶ ಜಯ।।ಅಂಬೆ।। ಪರಬ್ರಹ್ಮ ಹೃದಯಾನಂದ ಲಹರೀ। ಪ್ರಪಂಚ ಸೃಷ್ಟಿ ಸ್ಥಿತಿಲಯಕಾರಿ। ಮೂಲ ಪ್ರಕೃತಿ ಆದಿಶಕ್ತಿ। ಘರಘರ ಕರ ತೋಹೇ ಪೂಜಾ ಆರತಿ।।ಅಂಬೆ।।

ಗಿರಿರಾಜ ವರಪುತ್ರಿ (ಆರತಿ)

ಗಿರಿರಾಜ ವರಪುತ್ರಿ। ಗಿರಿಧಾರಿ ಸೋದರಿ। ಗಿರಿವಾಸನಾಪ್ರಿಯೆ ನಿನಗಾರುತಿ। ತ್ರಿನಯನಿ ತ್ರಿನಯನರ್ಧಾಂಗಿ। ತ್ರಿಜಗನ್ಮಾತೆ ಮಂಗಳಧಾತೆ ಮುದದಾರತಿ। ಶ್ರೀಗೌರಿ ಜಯಗೌರಿ ನಿನಗಾರತಿ। ಹೇ ಪರಮೇಶ್ವರಿ ನಿನಗಾರುತಿ।।1।। ಅಮೃತವರ್ಷಿಣಿ ಆನಂದಮಯಿ। ಬ್ರಹ್ಮಾನಂದದಾಯಿನಿ ಮುದದಾರತಿ। ಶ್ರೀಚಕ್ರನಾಯಿಕೆ ಓಂಕಾರಾತ್ಮಿಕೆ। ಚಾಮುಂಡಾಂಬಿಕೆ ಮುದದಾರತಿ। ಶ್ರೀಗೌರಿ ಜಯಗೌರಿ ನಿನಗಾರುತಿ। ಹೇ ಪರಮೇಶ್ವರಿ ನಿನಗಾರುತಿ। ಶ್ರೀಕರಿ ಶಿವಕರಿ ಶಂಕರಿ ಶಾರ್ವರಿ। ಪರಮ ಕೃಪಾಕರೀ ದೀಪಾರತಿ।।3।।

ಕರಿಮುಖನ ಬಲಗೊಂಡು (ವ್ರತಕಥೆ)

ಕರಿಮುಖನ ಬಲಗೊಂಡು ಕರುಣೆಶಾರದೆಗೆರಗಿ। ಗುರುವಿನಂಘ್ರಿಯ ಸ್ಮರಿಸಿ ಮುದದಿ। ಕೈಲಾಸವಾಸನ ಕರುಣಕಟಾಕ್ಷದಲಿ। ಮಾಘಗೌರಿಯ ಕಥೆಯ ಪೇಳ್ವೆ।।1।। ಧರೆಯೊಳುತ್ತಮವಾದ ಬಹುಪುಣ್ಯ ದೇಶದಲಿ।

ಪುಣ್ಯಶೀಲನೆಂಬೋ ವಿಪ್ರನಿರಲು। ಪುತ್ರರೇಳು ಮಂದಿ ಸತ್ಯವತಿ ಸಹಿತಲೆ। ಕಷ್ಟದಾರಿದ್ರ್ಯ ದುಃಖದಲ್ಲಿದ್ದರು।।2।। ಒಂದು ದಿವಸ ಸತ್ಯವತಿ ಪತಿಯ ಪಾದಕ್ಕೆರಗಿ। ತಾಳಲಾರೆನು ನಾನು ದಾರಿದ್ರ್ಯವ। ಪುತ್ರರನು ಒಡಗೊಂಡು ಮತ್ತೊಂದು ಊರಿಗೆ। ಪೋಗಿ ಬರುವೆನೆಂದು ಹೊರಟಳಾಗ।।3।। ದಾರಿಯಲಿ ಬರುತಿರಲು ಅಸ್ತಮವಾಗಲು। ಪುತ್ರರು ಹಸಿವೆಂದು ಅಳುತಿರಲು। ಒಬ್ಬ ಗೌಡನ ಮನೆಯ ಬಾಗಿಲಲಿ ಮಲಗಿರಲು। ಬೆಳಗಾಗಲಿ ಜಲವ ಕೊಡುವೆನೆನಲು।।4।। ಸೂರ್ಯ ಉದಯಕೆ ಮುನ್ನ ಬಾಲಕರನೊಡಗೊಂಡು। ಬೇಗದಿಂ ಗಂಗಾನದಿಗೆ ಬರಲು। ಮಾನುನಿಯರೆಲ್ಲರು ಪರಮ ಸಂತೋಷದಿ। ಮಾಘದ ಗೌರಿಯ ಪೂಜಿಸುತ್ತಿದ್ದರು।।5।। ಈ ವ್ರತವ ಹೇಗೆ ಮಾಡೋದು ಎನಗೆ ಹೇಳಿರೆಂದು। ಸತ್ಯವತಿಯು ತಾ ಬೆಸಗೊಳ್ಳಲು। ಮಿತ್ರೆಯರೆಲ್ಲರೂ ಅತ್ಯಂತ ಹರುಷದಲಿ। ಪೂಜಾವಿಧಾನವನು ಹೇಳುತಿರಲು ।।6।। ಮಾಘಶುದ್ಧ ಮೊದಲಾದ ಮೂವತ್ತು ದಿನಗಳವರೆಗೂ। ಸೂರ್ಯಉದಯಕೆ ಮುನ್ನ ಮೈಯ ತೊಳೆದು। ಮರಳಗೌರಿ ತೆಗೆದು ಬೇಗ ಪೂಜೆ ಮಾಡಿ। ದಾರಿದ್ರ್ಯ ಪತನವಾಗಿ ಬಹುಭಾಗ್ಯವಹುದು।।7।। ಸತ್ಯವತಿ ಶೀಘ್ರದಲಿ ಮತ್ತೆ ಮೈಯನು ತೊಳೆದು ಮಂಗಳಗೌರಿ ತೆಗೆದು ಪೂಜೆಮಾಡಿ। ಮಂಗಳಾರತಿ ಮಾಡಿ ಅಕ್ಷತೆತಳಿಯೆ। ಸುತ್ತಲೂ ನವವಿಧವಾದ್ಯಗಳೆಸೆದವು।।8।। ಸತ್ಯವತಿ ಮಾಡುವೋ ಭಕ್ತಿ ಪೂಜೆಗೆ ಮೆಚ್ಚಿ। ಇಚ್ಛೆಯಾದ ವರಗಳು ಬೇಡು ಎನಲು। ದಾರಿದ್ರ್ಯ ಹತವಾಗಿ ಬಲು ಭಾಗ್ಯ ಬರಬೇಕು। ನೀನೆಮ್ಮ ಹೃದಯಲಿ ಇರಲು ಬೇಕು।।9।। ಇಷ್ಟವರಗಳ ಕೊಟ್ಟೆ ನಾನೆಂದಳು। ಸುತ್ತಲೂ ಸತಿಯರು ನಿಂತಿರಲು। ಮಿತ್ರೆಯೊಬ್ಬಳು ಬಂದು ಅಂಜದಿಯೆ ನೀನಾರು। ಸತ್ಯವತಿ ಗುಪಚಾರ ಮಾಡುತಿಹಳು।।10।। ಮುತ್ತು ಮಾಣಿಕ್ಯವು ಪಟ್ಟೆ ನೀಲವು ಬಿಗಿದಿಹ ಪಲ್ಲಕ್ಕಿಯ ತಂದಿಹರು। ಪುತ್ರರನ್ನು ಒಡಗೊಂಡು ಸತ್ಯವತಿ ಶೀಘ್ರದಲಿ। ತನ್ನ ಪಟ್ಟಣಕಾಗಿ ಸಾಗಿಬರಲು।।11।। ಪರ್ಣಶಾಲೆಗಳೆಲ್ಲ ಹೊಳೆವೊ ಅರಮನೆಯಾಯ್ತು। ಚಿನ್ನದುಪ್ಪರಿಗೆಶಾಲೆ ಪೊಳೆಯೆ। ಧನಧಾನ್ಯರಾಶಿಗಳು ಪೂರ್ಣವಾಯಿತು ಪರಮ। ಉತ್ತಮ ವಾಯಿತು ಬ್ರಾಹ್ಮಣನ ಸಿರಿಯು।।12।। ಬಾಲಕರಿಗೆಲ್ಲರಿಗೂ ಬೇಗ ಮದುವೆಯಮಾಡಿ। ಮಾನುನಿಯರೆಲ್ಲರು ಮನೆಗೆ ಬರಲು। ಅಷ್ಟು ಶುಭಶೋಭನವು ನಿತ್ಯ ಉತ್ಸವದಿಂದ। ಪತಿಗಳೆಲ್ಲರೂ ಸುಖದಲ್ಲಿದ್ದರು।।13।। ಆ ದೇಶದ ಧರ್ಮರಾಜನ ಸತಿಯು। ಈ ವಾರ್ತೆ ಕೇಳಿ ಕಡುಕ್ಲೇಶದಿಂದ। ಏಳುಮಂದಿತಲೆಯ ಒಡೆದು ತನ್ನಿರೆಂದು। ತಾನು ಕಟುಕರಿಗೆ ನೇಮಿಸಿದಳು ।।14।। ಏಳುಮಂದಿಯ ತಲೆಯ ಕಡಿದು ತಂದರು ಕಟುಕರು। ಧರ್ಮರಾಜನ ಸತಿಯು ಕೈಲು ಪಡೆದು। ಮೊರದ ಬಾಗಿನವಿರಿಸಿ ಸತ್ಯವತಿ ಸೊಸೆಯರನು। ಆರ್ತಿಯಿಂದಲಿ ತಾನು ಕರೆಸಿದಳು।।15।। ಬಂದವರ ನೋಡಿ ರಾಜನ ಸತಿಯು ನಸುನಕ್ಕು। ಮೊರದ ಬಾಗಿನವನ್ನು ತಂದುಕೊಡಲು। ಮೊರದ ಬಾಗಿನ ತಂದು ದೇವರ ಮನೆಯಲಿರಿಸಿ। ಸತ್ಯವತಿ ಪುತ್ರರನು ಕರೆದಳಾಗ।।16।। ಅಮ್ಮ ಬಂದೇವೆಂದು ನಡೆದಂತು ಬಾಲಕರು। ಬ್ರಾಹ್ಮಣರ ಪಂಕ್ತೇಲಿ ಭೋಜನ ಮಾಡಿ। ಮಿತ್ರರೆಲ್ಲರು ಮೊರದಬಾಗಿನ ತೆಗೆಯೆ। ಚಿನ್ನದಾ ಗಟ್ಟಿಗಳ ಕಂಡರಾಗ।।17।। ಚಿನ್ನದಾ ಗಟ್ಟಿಗಳ ತೆಗೆತಂದು ಬಾಲೇರು ಸತ್ಯವತಿಯ ಮುಂದೆ ಇರಿಸಿದರು। ಮಾಘದ ಗೌರಿಯ ದಯ ನಮಗಿದೆ ಎನಲು। ಆ ವಾರ್ತೆ ರಾಜನ ಸತಿಗೆ ತಿಳಿಯಿತು।।18।। ರಾಜನ ಸತಿ ಆಶ್ಚರ್ಯವನೆಗೊಂಡು। ಸತ್ಯವತಿಯ ಮನೆಗೆ ಕರೆಸಿದಳು। ನಿಮ್ಮ ಬಾಗಿನದಲ್ಲಿ ಏನೇನು ಇರಿಸಿತ್ತು। ಬೇಗದಿಂದ್ಹೇಳೆಂದು ಬೆಸಗೊಂಡಳು।।19।। ನೀವುಕೊಟ್ಟ ಬಾಗಿನವ ದೇವರ ಮುಂದಿರಿಸಿ। ಮತ್ತೆ ನಾವಿಲ್ಲಿ ಭೋಜನವ ಮಾಡಿ। ಮಿತ್ರೆಯರೆಲ್ಲರು ಮೊರದ ಬಾಗಿನ ತೆರೆಯೆ। ಚಿನ್ನದ ಗಟ್ಟಿ ಮತ್ತೇನು ಕಾಣಲಿಲ್ಲ।।20।। ಮಿತ್ರೆ ಸೋತಳು, ಈ ಭಾಗ್ಯವು। ಮತ್ತೆ ಎಲ್ಲಿಂದ ಬಂತು, ಪೇಳಮ್ಮ। ಯಾವ ವ್ರತ ಯಾವಫಲ ಹೇಗೆ ಮಾಡುವುದು। ಬೇಗದಿಂ ಪೇಳೆಂದು ಬೆಸಗೊಂಡಳು।।21।। ರಾಜನ ಸತಿ ಕೇಳು ಗಂಗಾನದಿಯಲ್ಲಿ। ಮಾಘದ ಗೌರಿ ಪೂಜಿಸುತ್ತಿದ್ದರು। ಆ ವ್ರತವ ನಾ ಮಾಡಲು ಶೀಘ್ರದಲಿ। ಆಗಲೇ ಧನಧಾನ್ಯ ಕೂಡಿಬಂತು।।22।। ಇಂತೆಂಬೊ ವ್ರತಗಳನು ರಾಜನ ಸತಿಗ್ಹೇಳಿ। ಸತ್ಯವತಿಯು ಸಾಗಿ ಮನೆಗೆ ಬರಲು। ರಾಜನ ಸತಿ ಮಾಘದ ಗೌರಿ ಪೂಜಿಸಲು। ಬಂಜೆತನ ಪೋಗಿ ಬಾಲಕರ ಪಡೆದಳು।।23।। ಸತ್ಯವತಿ ಮನೆಯಲ್ಲಿ ಉತ್ತಮದ ಹರಿಯಸೊಸೆ। ಮತ್ತೆ ಕಲಹದಲಿ ಪ್ರತ್ಯೇಕವಿರಲು। ಮೂರುದಿನದ ಮೇಲೆ ಕಡುದಾರಿದ್ರ್ಯ ಹೆಚ್ಚಿ। ಪತಿಯ ನಿಷ್ಠುರ ವಾಕ್ಯವ ನುಡಿದಳು।।24।। ತುಚ್ಛವ ನುಡಿಬೇಡ ಕಟ್ಟಿಕೊಡು ಬುತ್ತಿಯನು। ಮತ್ತೆ ಸೌದೆಗೆ ನಾನು ಹೋಗಿ ಬರುವೆ ತಂದುತುಡಿಲ। ಕೂಡಲು ಬಿಂದಿಯೊಳಗೆಸುತ್ತಿ।

ಬೃಂದ್ಯದಲಿ ಕಾಡಿಗಾಗಿ ತಾ ಹೊರಟನು॥25॥ ಮರದ ಮೇಲೇರಿ ಕೊಂಬೆಯನು ಕಡಿಯಲು। ಕಾಳಿಂಗಸರ್ಪವು ಬಂದು ಸೋಕೆ ಮರದಿಂದ ಜಾರಿ। ಮೈಮರೆತು ಭೂಮಿಗೆ ಬಿದ್ದು। ದೀರ್ಘನಿದ್ರೆಯಲಿ ಮಲಗಿದ್ದಾ ನಾಗ॥26॥ ಮಾನುನಿಯ ಕನಸಿನಲಿ ಮಾಘದ ಗೌರಿ ಬಂದು। ನಾರಿ ನಿನ್ನಯ ಮಗನು ಮೃತನಾದನು। ಆ ವಾರ್ತೆ ಕೇಳಿ ಮನದಲ್ಲಿ ನೊಂದು। ಎಚ್ಚೆತ್ತು ಬಾಲನಿದ್ದೆಡೆಗೆ ಬಂದಳು॥27॥ ಕಾಡೊಳಗೆ ಮೈತೊಳೆದು ಮರಳ ಗೌರಿಯ ತೆಗೆದು। ಬಲುಭಕ್ತಿಯಿಂದ ಪೂಜೆ ಮಾಡಲು। ಮಂಗಳಾರತಿ ಎತ್ತಿ ಅಕ್ಷತೆ ತಳಿದರೆ ಬಾಲನು ಮೈಮುರಿದು ಎದ್ದು ಕುಳಿತ॥28॥ ಕಂದ ನೀನೀರೀತಿ ಇಲ್ಲೇಕೆ ಬಂದೆನಲು। ಆ ದಿನದ ವಾರ್ತೆಯನು ಪೇಳಿದನು। ಸಂಭ್ರಮವಾಯಿತು ಇನ್ನೂ ಒಂದಿಗೆ ನಡೆ। ಅಂದು ಮಗ ಸೊಸೆಯು ನಡೆತಂದರು॥29॥ ಕಾಶಿಗತ್ಯಧಿಜವೆಂಬ ಬಹುಕರ್ಣೂರಿನಲ್ಲಿ। ಪ್ರೀತಿಯಿಂದಲಿ ಬಂದು ನೆಲೆಸಿಹಳು। ತನ್ನ ಸೇವೆಯ ಮಾಳ್ಪ ಮಾನುನಿ ಸ್ತ್ರೀಯರಿಗೆ। ತನ್ನ ಸಾಮ್ರಾಜ್ಯ ಪದವಿಯ ನೀವಳು॥30॥ ಈ ರೀತಿಯಲಿ ಹದಿನಾಲ್ಕು ವರುಷ ವ್ರತವನ್ನು। ಶಕ್ತಿಯಿದ್ದಷ್ಟು ಉದ್ಯಾಪನೆಯ ಮಾಡಿ। ಮುತ್ತೈದೆರಿಗೆ ಮೊರದಬಾಗಿನ ಕೊಟ್ಟು। ಮುತ್ತೈದೆತನ ಸುಖವ ಪಡೆವೋರು॥31॥ ಮಾಘಶುದ್ಧ ಮೊದಲಾದ ಮುವ್ವತ್ತು ದಿನಗಳಲಿ। ನಾರೀರು ಈ ವ್ರತವ ನಡೆಸಲು। ಅಷ್ಟ ಐಶ್ವರ್ಯವು ಪುತ್ರ ಸಂತಾನವು। ಮುತ್ತೈದೆ ಸುಖವ ಪಡೆಯುವರು॥ ಜಯಮಂಗಳಾ ನಿತ್ಯ ಶುಭಮಂಗಳಾ॥ ಸಂಪೂರ್ಣಂ॥

❖ ❖ ❖

63. ಮೌನಗೌರಿ ವ್ರತ

ಗಿರಿನಂದಿನಿ ಬಾರೌ ಹಸೇಗೇ **ರಾಗ: ಖರಹರಪ್ರಿಯ**

ಗಿರಿನಂದಿನಿ ಬಾರೌ ಹಸೇಗೇ ಕರುಣಾಕರಿ ಪರಮೇಶ್ವರಿ॥ಪ॥ ಇಂದುಧರನು ನಿನ್ನ ತಂದೇ ಯಾಗದೋಳು। ನಿಂದೀಸುತ್ತಲೀರೇ। ನೊಂದುಮನದೊಳು ಅಂದು ಅಗ್ನಿಯೊಳು ನಿಂದು ದಹಿಸಿ ಬಂದೆ ಚೆಂದದಿಂ ಗಿರಿರಾಜನೋಳ್ ಜನಿಸಿದೆ॥1॥ ಹರಿಣಾಂಕ ವೇಣೀ ಹರಿಣಾಕ್ಷಿಯೇ। ಹರಿವಾಣಿಯೇ ಹರಿವೇಣಿಯೇ। ಹರಿವಾಹನೆಯೇ ಹರಿಪೀಠಸೇರು। ಹರಿಣಾಕದರಸತೀ ಪಾರ್ವತಿ॥2॥ ಮಾರಹರನ ವರಿಸೇ ನಾರೀಮಣಿಯೆ ನೀನು। ಘೋರಾ ಕಾನನಾ ಸೇರಿ ಬಳಲಿದೇ ಮಾರಜನಕ ವೆಂಕಟೇಶನಾ ಸೋದಾರೀ ಮಾರವೈರಿ ಬಂದಿಹ ಬಾರೇ ನೀ ಹಸೇಗೇ॥3॥

ಸರ್ವಮಂಗಳೇ ಕಾಯೇ **ರಾಗ: ಕಾಂಭೋದಿ**

ಸರ್ವಮಂಗಳೇ ಕಾಯೇ ಪಾರ್ವತಿಯೇ॥ಪ॥ ಊರ್ವೀಧರಾತ್ಮಜೆಯೇ ಶರ್ವಜಾಯೇ॥ಅ.ಪ॥ ಕಾತ್ಯಾಯಿನಿ ಗೌರಿ। ಭೃತ್ಯಜನ ಶುಭಕಾರಿ। ಮತ್ತಮಹಿಷನವೈರಿ। ರಾಜೇಶ್ವರಿ। ಚಿತ್ತೈಸಿ ಎನ್ನ ಪರಿ। ಉತ್ತಮಾಮತಿ ತೋರಿ। ಗೋತ್ರಪತಿ ಸುಕುಮಾರಿ ಶಿವಶಂಕರಿ॥1॥ ವಾರಣಾಸ್ಯನ ಮಾತೆ। ಕಾರುಣ್ಯ ರಸಭರಿತೆ। ಧಾರುಣಿಜೆ ಪತಿ ಭಕುತೆ। ಭವವನದಿ ಪೋತೆ। ಕಾರುಣ್ಯಮಯೆ ವನಿತೆ। ಮಾರಣಾಸ್ತ್ರವಿ ನಮಿತೆ। ಶರಣನಿಗೆ ಮಂತ್ರಿಸುತೆ। ಶರವರವನಿತ್ತೆ॥2॥ ಭುಜಗ ಭೂಷಣ ರಾಣಿ। ಗಜಗಮನೆ ಕಲ್ಯಾಣಿ। ಸುಜನಾಬ್ಜ ಗಗನಮಣಿ। ದುರ್ಗೆ ಶರ್ವಾಣಿ। ಅಜನ ತಂದೆ ವೆಂಕಟೇಶ। ವಿಠಲ ಪಾದಬ್ಜಮಣಿ। ನಿಜಶಿರದಿ ಧರಿಸಿರುವ। ಮಧುರಾ ವಿಹಾರಿಣಿ॥3॥

ಮಾತಾಡೆ ಗೌರಿ ಮಾತಾಡೆ **ರಾಗ: ಆರಭಿ**

ಮಾತಾಡೆ ಗೌರಿ ಮಾತಾಡೆ॥ಪ॥ ಮಾತಾಡೆ ಎನ್ನ ಮೌನದ ಗೌರಿ ಮಾತಾಡೆ। ಯಾತಕೆ ಛಲಮನ ಸೋತವಳೊಡನೆ ॥ಅ.ಪ॥ ನಸುನಗೆಮೊಗವಿದು ಬಾಡಿ। ಚೆಂದುಟಿಯು ಎಸೆದಿರಲು ನಾ ನೋಡಿ...ವಸುಧೆಯೊಳಗೆ ನಾ ಜೀವಿಸಲಾರೆ। ರಸಕಸ ಯಾತಕೆ ತುಂಬಿತು ಅರಗಿಳಿ॥1॥ ಕ್ಷಣಬಿಟ್ಟುಗಲಿರಲಾರೆ ಅಂಬಾ। ಷಣ್ಮುಖ ಗಣಪರ ಮಾತೆ ಅಮ್ಮಾ ಎನ್ನವಗುಣಗಳ ಎಣಿಸದೆ ಬಾರೇ। ನಿನ್ನನ್ನು ಬಿಟ್ಟರೇ ಗತಿಯಿನ್ನಾರೇ॥2॥ ಕ್ರೋಧವ್ಯಾತಕೆ ಎನ್ನೊಳು ಗೌರೀ। ಏನಪರಾಧವಿದ್ದರು ನೀ ತಾಳಿ। ಶ್ರೀಧರ ವಿಠಲನ ಪಾದ ಕಿಂಕಿಣಿಯೆ। ಆದರಿಸುವೆ ನಾ ನಿನ್ನಾದರಿಸುವೆ॥3॥

ಮೌನಗೌರಿಯ ಗೋಪಕನ್ಯೆಯರು (ಸುಳಾದಿ) ರಾಗ: ಭೌಳಿ–ಅಟ್ಟತಾಳ

ಮೌನಗೌರಿಯ ಗೋಪಕನ್ಯೆಯರು ಹರಿಯ ಧ್ಯಾನಿಸುತ್ತರುಣೋದಯದಲೆದ್ದು ಮಾನಿನಿಯರು ಗಳೆಲ್ಲರು ಕೂಡಿ ಹರಿಯ ಸುಮ್ಮಾನದಿಂದಲಿ ಪಾಡುತಲಿ॥ಪ॥ ಬಂದು ಚಿಣಿಚೀನಾಂಬರಗಳ ತೀರದಲಿಟ್ಟೆಲ್ಲ ಸ್ನಾನವ ಮಾಡುತಿದ್ದರು ಕಾಳಿಂದಿಯಲ್ಲಿ ಸಾನುರಾಗದಿ ಗೋಪರಕೂಡಿಕೊಂಡು ನಂದಸೂನು ಶ್ರೀಕೃಷ್ಣನಲ್ಲಿಗೊಲಿದು ಬಂದು ಮಾನಿನಿಯರ ಸೀರೆಗಳ ತಕ್ಕೊಂಡು ವಿಮಾನ ದಂತೆಸೆವ ತರುವನೇರಿ ಶ್ರೀನಾಥ ವೆಂಕಟಪತಿ ಕೃಷ್ಣನು ಪಂಕಜಾನನೆಯರಿಗೆ ನಗುತಲಿಂತೆಂದನು ॥1॥ ಶಶಿಮುಖಿಯರಿರ ನೀವೊಬ್ಬರೊಬ್ಬರಾಗಿಯೆ ಭರವಸದಿಂದ ನಾವಿದ್ದ ಠಾವಿಗೆ ಬಂದು ಬಂದು ನಿಮ್ಮ ವಸನಗಳನು ಈಸಿಕೊಳ್ಳಿ ನಾವೆಂದೆಂದು ಪುಸಿಯನಾಡುವ(ರ)ಲ್ಲ ಗೋಪರೆಲ್ಲರು ಬಲ್ಲರು ಬಿಸಜನಯನ ವೆಂಕಟಕೃಷ್ಣ ಆಡಿದ ಪರಿಹಾಸವ ಕೇಳುತ ಗೋಪಕನ್ನಿ ಕೆಯರಿಂತೆಂದರು ॥2॥ ಬಲ್ಲೆವು ನಾವೆಲೆ ಕೃಷ್ಣ ನಿನ್ನನು ವ್ರಜವಲ್ಲಭ ನಂದಗೋಪಸುತನೆಂತೆಂಬುದ ಮೆಲ್ಲಡಿಗಳ ನೊತ್ತುವ ದಾಸಿಯರೊಳು। ಬಲ್ಲಿದತನವನು ಮೆರೆವುದುಚಿತವೆ ಫುಲ್ಲನಯನ ವೆಂಕಟ ಶ್ರೀಕೃಷ್ಣ ಛಳಿನಿಲ್ಲಲ್ಲಿ ಎಮ್ಮ ಸೀರೆಗಳ ಕೊಡು ದಮ್ಮಯ್ಯ॥3॥ ವಾರಿಜಾಕ್ಷನೆ ದುಷ್ಟತನವ ಬಿಟ್ಟು ನಮ್ಮ ಸೀರೆಗಳನು ಕೊಡಿಸದಿದ್ದರೆ ಅರಸಿಗೆ ದೂರಹೇಳುವೆ ನಿನ್ನ ತರಿಸುವೆವು ಊಳಿಗ ಸಾರಿದೆವೆಮ್ಮ ಸೀರೆಗಳನು ಕೊಡು ಕೊಡು ಮೀರಿದ ಯಮುನೆಯ ಮಳಲಿಂದಲಿಟ್ಟು ನಿನ್ನ ಗಾರುಮಾಡುವೆವೊ ವೆಂಕಟಪತಿ ಸಿರಿಕೃಷ್ಣ॥4॥ ಹರಿಯವರಾಡಿದ ಮಾತನು ಕೇಳಿ ನೀವು ಕಿಂಕರಿಯರಾದರೆ ಎನ್ನ ಮಾತು ಕೇಳಿ ಸರೋವರ ಪೊರಮಟ್ಟು ಮರನತಳಕೆ ಬಂದೆನಗೆರಡು ಕರವ ಮುಗಿದು ನಿಮ್ಮ ಸೀರೆಗಳನೀಸಿಕೊಳ್ಳಿ ಅರಸುಗಿರಸಿಗೆ ನಾನಂಜುವ ನಲ್ಲವೆಂಬ ತಿರುವೆಂಕಟ ಪತಿ ಕೃಷ್ಣಗೆ ಕರವ ಮುಗಿದರು॥5॥ ಶ್ರೀನಾಥ ವೆಂಕಟಕೃಷ್ಣ ಪತಿ ಗೋಪಕುಮಾರ್ತೆ ಯರಿಗೆ ಸೀರೆಗಳನಿತ್ತಲಿದನು॥

ಮೌನಗೌರಿಯ ಹೆಣ್ಣುಹೈಕಳ ಕೂಡೆ

ಮೌನಗೌರಿಯ ಹೆಣ್ಣುಹೈಕಳ ಕೂಡೆ ಶ್ರೀನಾಥ ನಿನಗೆ ಸಲ್ಲದು ಹಸುಮಕ್ಕಳಾಟ॥ಪ॥ ತರಳ ನೀ ನಮ್ಮ ಸೀರೆಯ ಹೊತ್ತುಕೊಂಡು ತರುವನೇರಿ ರಕ್ಕಸ ಗೆಲುವ॥ ತರುವಳ್ಳಿತನಕೆ ನಿನ್ನ ಪೇರುರವ ತರುಣಿ ನಗುತಾಳೆ ಪೊಕ್ಕಾಟ ಸಾಕೆಂಬ॥1॥ ಸ್ನಾನವ ಮಾಡಿ ಮೌನಗೌರಿಯ ನೋನಲೀಯೆ ಮೌನವ ಕೆಡಿಸಿ ಧ್ಯಾನವ ಮಾಡಲೀಯೆ ನಿನ್ನ ಚೆನ್ನಗರೂಹ ನೆನೆಸುತ ವಾಸಿಯೆಂಬುದ ನಾವರಿಯೆವು॥2॥ ನಿನ್ನ ಪೊಕ್ಕಳ ಬೊಮ್ಮನಿನ್ನುದರದ ಜಗ ನಿನ್ನಂಗದ ಸುರಮುನಿಗಳೆಲ್ಲ ನಿನ್ನ ನೆನಗುವರೋ ನೀನರಿಯದೆ ನಮ್ಮ ಚನ್ನವಾಡುವ ಹೆಡ್ಡಾಟ ಸಾಕೆಂಬ॥3॥ ತುತಿಸಿ ತುತಿಸಿ ಕಾಮರು ಬ್ರಹ್ಮರುದ್ರರು ಮತಿಗೊಳಗಾಗೆ ಮುನೀಶ್ವರರ ಶ್ರುತಿಗಳು ನಿನ್ನನು ಪುಡುಕಲರಿಯವು ಬಾಲ ಸತಿಯರೊಡನೆ ಖೇಳಮೇಳಾಟ ಸಾಕೆಂಬ॥4॥ ಎಸಳುಕಂಗಳ ಧಾಳ ನಸುನಗೆ ಕೌಸ್ತುಭ ಎಸೆವ ಕಂಠದ ತುಲಸಿಯದಂಡೆ ಮಿಸುನಿಯ ವಸನ ಉಲಿವ ಪೆಂಡೆಯ ಹೊಸ ಹೊಸ ಚೆನ್ನಿಗ ಪರಿಹಾಸ ಸಾಕೆಂಬ॥5॥ ಅರಸನ ಮಗನೆಂದು ತಾಳಿದೆವಲ್ಲದೆ ಸರಸಿಜಾಕ್ಷ ಯಮುನೆಯ ಮಳಲಲ್ಲಿ ಸರಸದಲಿದ್ದರೆ ನಿನ್ನಂಗದಲಿಹ ಸುರರೋಡಬೇಕು ಸರಸ ಸಾಕೆಂದೆಂಬ॥6॥ ಚೆಲುವರ ತಿಲಕ ರಸಿಕರ ಶಿರೋಮಣಿ ಲಲನೆಯರ ಮನ ಸೂರೆಗಾರ ಫಲಿಸಿತು ವ್ರತವೆಮ್ಮ ಕೃಷ್ಣ ನಿನ್ನೊಲುಮೆಯ ಬಲೆಗೆ ಸಿಕ್ಕದರಾರು ಸೊಬಗಿನೊಬ್ಬುಳಿಯೆಂಬ॥7॥

ಶ್ರೀಗುರು ಗಣಪತಿ ಶಾರದೆಗೆರಗಿ (ವ್ರತಕಥೆ) ರಾಗ: ಮೋಹನ

ಶ್ರೀಗುರು ಗಣಪತಿ ಶಾರದೆಗೆರಗಿ ಚರಣಕಮಲಕೆ ಎರಗಿ ಪೇಳುವೆನು। ಹರ ಪಾರ್ವತೀ ಸಹ ನಂದಿಯನೇರಿ ಪ್ರಮಥ ಗಣರುಗಳ ಸಹಿತ ನರಲೋಕಕೆ ಸಂಚಾರವಾಗಿ ಬರುತಿರೆ ಸರಸೀತಡಿಯಲ್ಲಿ ತರಳೆಯರೆಲ್ಲರು ಭರದಿಂದ ಮಿಂದು ಮಡಿಯನುಟ್ಟು ಗೌರಿಯ ಮುದದಿ ಪೂಜಿಸುತ್ತಿದ್ದರು॥ಮುದದಿಂದಲೆ ವಿಧವೆಯರೆಲ್ಲ ಮಿಂದು ಚದುರತನದಲಿ ವೀಭೂತಿಯನು ಇಟ್ಟು ಒದಗಿದ ಬಿಂದಿಗೆಯಲಿ ಗಂಗೆಯ ತುಂಬಿ ಒದ್ದೆ ವಸ್ತ್ರವನುಟ್ಟು ಎದುರಿನೋಳ್ ಹರ ಪಾರ್ವತಿ

ಸಹಿತ ಬರುತಿರೆ ಇದು ಏನು ಕಾರಣ ಇವರು ಮಾಡಿದ ಫಲಾ ಹದನವು ಪೇಳಬೇಕೆನುತ ಬಿನ್ನೈಸಲು ಮುದದಿಂದಲ್ಲರ ನುಡಿದ।। ಇವರು ಪೂರ್ವದಿ ಮೌನಗೌರಿಯ ನೋಮಿಯ ವಿವರಿಸೆ ಪುಣ್ಯಾತ್ಮರು ಧರೆಯೊಳಗೆ ಇವರುಲ್ಲಂಘಿಸಿದ ಪಂಚಪಾತಕಿಯರೆನುತ ಪೇಳೇ ವಿವರಿಸಿ ಹೇಳಬಹುದು ಮೌನಗೌರಮ್ಮನ ಹದನವೆನು ಪ್ರಮುಖಾದ್ಯರು ಪೇಳಲು ಭುವನಕೆ ಉಪಕಾರವಾಗಬೇಕೆನುತಲೀ ಪರಶಿವ ಪೇಳಿದ ಕಥೆಯಾ।। ಮಾಘ ಶುದ್ಧದಾ ತದಿಗೇ ದಿನದಿಂದಲಿ ಫಾಲ್ಗುಣ ಶುದ್ಧ ತದಿಗೇವರೆಗೆ ಆಗುವುದೊಂದು ತಿಂಗಳು ಪರಿಯಂತರ ನಡೆಸುವರೀವ್ರತವಾ।। ತದಿಗೆ ಭಾನುವಾರದ ದಿನದಲ್ಲಿ ಮರಳು ಗಂಗೆಯ ತಡಿಯಲಿ ಮಡಿಯನುಟ್ಟು ಮರಳು ಈಶ್ವರನ ಅರಿಶಿನ ಗೌರಿಯೊಡನೆ ಗಂಗೆಯನೇರಿಸಿ ಒಪ್ಪುವ ತುಂಬೆ ತುರುಬೆ ಹೂ ತಂದು ತುಪ್ಪಹಾಲಿನೊಳದ್ದಿ ಪೂಜೆಯ ಮಾಡಿ ಪರಮೇಶ್ವರಗೆ ತಿಲಾಕ್ಷತೆ ತಳಿದು ಫಲವ ಸಮರ್ಪಿಸಿ ತಾಂಬೂಲವ ಕೊಟ್ಟು ಬೆಳಗಿದರಾರುತಿಯ।। ಅಸ್ತಮಾನಕೆ ಮುನ್ನ ಭೋಜನಮಾಡಿ ಪ್ರದಕ್ಷಿಣೆ ಮಂತ್ರಾಕ್ಷತೆ ತಳಿದೂ ಒಪ್ಪುವೀತೆರದಲಿ ಒಂದು ತಿಂಗಳು ನಡೆಸುವುದೀ ವ್ರತವಾ।। ಮೊದಲ್ವರುಷಕೆ ಐದು ಪಡಿ ತಂಡುಲವು ತಡೆಯದೆ ಹೊಸ ಮೊರದೊಳಗೆ ತಂದಿರಿಸಿ ಹಿಡಿಯರಿಶಿನ ಕುಂಕುಮ ಕಾಡಿಗೆ ಕರಿಮಣಿಸರ ಇರಿಸೀ ಕಡು ಹರುಷದಿ ಸೀರಿಕುಪ್ಪಸ ಇರಿಸೀ ಕೋಮಲವಾದ ಫಲಂಗಳಿರಿಸಿ ದೃಢಚಿತ್ತಗಳಿಂದ ಮೊರದ ಬಾಗಿನವನು ಕೊಡುವರಾದಿವಸ।। ಮಾರನೆ ವರ್ಷಕೆ ಲವಣವನಿರಿಸೀ ಮೂರೊರುಷಕೆ ಚಣಕದ ಫಲವಿರಿಸಿ ವಾರಂತೆ ನಾಲ್ಕಕ್ಕೆ। ಮತ್ತೈದಕೆ ಅರಿಶಿನ ಕೊನೆ ಇರಿಸಿ ಮೀರಿ ಸುವರ್ಣದ ಪ್ರತಿಮೆಯ ಮಾಡಿಸಿ ಮಾರುತ ಲೋಕದಿ ಉದಿತರ ಸ್ತ್ರೀಯರಿಗಿದು ಎಂದೆನುತ ಪೇಳೆ ಇದು ಎನೆಂದೆನುತಲಿ ಕೋಣೆ ಮಧ್ಯದಿ ಕಾಂತೆಯರೆಲ್ಲರೂ ಸೇರುತ ವಿವರಿಸಿ ಪಡೆದರು ಮುತ್ತೈದೆತನಗಳನು ಏನೆಂಬಳೆ ಅಂಗಳ ತಾನೇ। ತರಳೆ ಕ್ಷಣವನು ಮಾಳ್ಪಳು ಮೌನಗೌರಿಯು ಪಚರಿಸುವರಿಗೆಲ್ಲಾ। ಏನಾಗೋದು ಇದನಿತ್ತರೆಂದು ನಾರಿಯರೆಲ್ಲರು ಕೇಳಲು। ಧ್ಯಾನ ಇಷ್ಟಾರ್ಥ ಸಿರಿಸಂಪತ್ತು ಸಂತಾನಭಾಗ್ಯವನ್ನು।। ತೂಗಿದರೇ ಕೊಂಬು ಕೋಣೆ ಮಧ್ಯದಿ ತೂಗಿದರೇ ಮುದ್ದು ರಾಮೇಶ್ವರನ ತೂಗಿದರೇ ಮುದ್ದು ಮೌನಗೌರಮ್ಮನ ಮಣೆಪಣದುಯ್ಯಾಲೆಯಾ।। ಜಯ ಜಯಾ ಮಂಗಳ।।

ಫಣೆಯ ಕುಂಕುಮ ಪೂಸಿದರಿಸಿನ (ಮಂಗಳ) ರಾಗ: ಮಧ್ಯಮಾವತಿ

ಫಣೆಯ ಕುಂಕುಮ ಪೂಸಿದರಿಸಿನ। ಎಣ್ಣೆಗಂಟಿನ ಸಣ್ಣ ಬೈತಲೇ। ಕಣ್ಣು ಕಾಡಿಗೆ ಇಂದಲೋಲಿವೋ। ಕನ್ಯೆ ಶ್ರೀಮಹಗೌರಿದೇವಿಗೆ ಮಂಗಳಾ ಜಯ ಜಯ ಮಂಗಳಾ।।ಪ।। ಮಂಡೆಗಿಕ್ಕಿನ ಹೆರಳಿಗೊಪ್ಪುವ ದುಂಡುಮಲ್ಲಿಗೆ ಜಾಜಿ ಸಂಪಿಗೇ। ತಂಡ ತೊಂಡಿಲದಿಂದ ಮೆರೆಯುವ ಕನ್ಯೆ ಶ್ರೀ ಮಹಾಗೌರಿದೇವಿಗೆ।।1।। ಧರೆಯೊಳತಿಶಯವೆನಿಪೊ ತಿರುಪತಿ ಗಿರಿಯ ವೆಂಕಟನರಸಿ ಎನಿಸಿದಾ। ಸಪ್ತ ಭಜಕಗಳಷ್ಟಪದವಿಯ। ಕರುಣಿಸೆನಗೆ ಮಹಾಗೌರಿ ದೇವಿಯೆ।।2।। ಅಂತು ದಕ್ಷಯಜ್ಞ ಮಾಡಲು। ಸಂದಣಿಪೊ ಸಮರದೊಳಗಿರುತಿರೇ। ಅಂಬಿಕೆಯು ನಡೆತರಲು ಹರುಷದೀ ಬಂದು ಯಜ್ಞ ಶಾಲೇಲಿ ಕುಳ್ಳಿರೇ ಗಂಡನಿಗೆ ಭಾಗವನು ಕೊಡದಿರೆ ಅಂದು। ಯಗ್ನದಿ। ದಹಿಸಿದಾಕೆಗೆ।।3।। ದಕ್ಷಯಗ್ನದಿ ದಹಿಸಿ ಮಾತೆಯು। ಪುತ್ರಿಯಾಗಿ ಗಿರಿರಾಜನುದರದೀ। ಹುಟ್ಟಿದಳು ಮೇನಕೆಯ ಗರ್ಭದಿ। ಭಕ್ತರಿಗಿಷ್ಟ ಫಲಗಳನೀಯುತ। ದಟ್ಟಡೆಗೆ ಲೀಲೆಗಳ ತೋರುತ। ಸೃಷ್ಟಿಮಾತೆಯು ಬೆಳಗುತಿದ್ದಳು।।4।। ಆಯಿತ್ತೈದೊರುಷಗಳು ದೇವಿಗೆ। ಬಾಲೆಹರನನು ಭಜಿಸುತಿದ್ದಳೂ। ತಾನು ವಹಿಸಿದಳುಗ್ರ ತಪವನು। ಕಪೋಲೆ ಹರಿಹರನಂಘ್ರಿ ದಯದಲೀ। ಭಾವಶುದ್ಧದ ಹೃದಯ ಕಮಲದಿ। ತಾನೊಲಿದು ನಿಂದಿರುವ ಗೌರಿಗೆ।।5।। ಇಂತು ಗಿರಿರಾಜಾನ ಕುಮಾರಿಯು। ಚಿಂತೆಯಲಿ ಬಹು ತಪಸಮಾಡಲು। ಅಂತರಾತ್ಮ ಕಳಾಗಿ ಮನದಲೀ। ಕಾಂತೆ ಅಂತರಂಗವ ತಿಳಿದು। ಚಿಂತೆಯನು ಪರಿಹರಿಸಿ ಕೈ ಹಿಡಿದಾ। ಶ್ರೀಕಾಂತನಾ ನೋಡಿದಾ ಶ್ರೀಗೌರಿಗೆ।।6।। ಬಂದು ಹರ ಸಮುದ್ರದಲಿ ಕೈ ಹಿಡಿಯೆ। ಅಂಬಿಕೆಯು ನಾಚಿದಳು ಹರುಷದೀ। ಅಂದು ಅಮರರು ಅರಳಗರೆಯಲು। ಅಜಭವಾದಿಗಳೆಲ್ಲ ಸ್ತುತಿಸಲೂ। ಬಂದು ವರಕಣ್ವಪುರದಿ ನೆಲಸಿದ। ಇಂದು ಶಿವನರ್ಧಾಂಗಿ ಗೌರಿಗೆ।।7।। ಮಂಗಳಂ ಗಿರಿರಾಜ ಪುತ್ರಿಗೆ। ಮಂಗಳಂ ಈಶ್ವರನ ಪತ್ನಿಗೆ। ಮಂಗಳಂ ಷಣ್ಮುಖನ ಮಾತೆಗೆ।

❖ ❖ ❖

64. ರಥಸಪ್ತಮಿ (ಸೂರ್ಯಾರಾಧನೆ)

ಉದಯೇ ಬ್ರಹ್ಮ ಸ್ವರೂಪಾಯ

ಉದಯೇ ಬ್ರಹ್ಮ ಸ್ವರೂಪಾಯ ಮಧ್ಯಾಹ್ನೇತು ಮಹೇಶ್ವರಃ। ಅಸ್ತಮಾನೇ ಸ್ವಯಂ ವಿಷ್ಣು ತ್ರಯಿಮೂರ್ತಿ ದಿವಾಕರಃ॥

ಒಂದು ಗಾಲಿ ಹಾಕಿದ ರಥ **ರಾಗ: ಭೂಪಾಳಿ**

ಒಂದು ಗಾಲಿ ಹಾಕಿದ ರಥ-ಅದರ ಅಂದ ಚಂದದಿಂದ। ಬಂದು ಕುಳಿತ ಅರುಣ ಸಾರಥಿ॥ಪ॥ ಹಾರ ಮಕುಟ ಕುಂಡಲದಿಂದ। ಕಿರೀಟ ಶಂಖು ಚಕ್ರದಿಂದ॥ಅ.ಪ॥ ಸಹಸ್ರ ಕಿರಣ ಜ್ವಾಲೆಯಿಂದ। ಸ್ವಾಮಿ ಬಾರೋ ಪ್ರೇಮದಿಂದ। ಮೂರು ಮೂರ್ತಿ ನೀನ್ ದಿವಾಕರ ಪಾಲಿಸೆನ್ನ॥1॥ ಮೂರು ಲೋಕದೊಡೆಯ ಭಾಸ್ಕರ॥ ಓಂಕಾರ ಬ್ರಹ್ಮನೀನೇ। ಝೇಂಕಾರ ವಿಷ್ಣು ನೀನೇ। ವೆಂಕಟಾದ್ರಿವಾಸ ನೀನೇ। ಶಂಕರಾದ್ರಿ ಪ್ರಿಯ ನೀನೇ। ಜನನ ಮರಣವಿಲ್ಲದಾತನೇ॥2॥ ಜಗತಿಗೊಂದು। ಜ್ಯೋತಿರೂಪನಾಗಿ ತೋರ್ಪನೇ। ಜನನ ಮರಣವಿಲ್ಲ ನಿನಗೆ ಜಾತಿ ಭೇದವಿಲ್ಲ ನಿನಗೆ ಜನನ ಮರಣ ಬಿಡಿಸುವಂಥ । ಭವತುರಾಜ ಸೂರ್ಯ ನೀನೇ॥3॥

ಆದಿತ್ಯನೆ ನೀ ಲೋಕವ ಬೆಳಗುವೆ **ರಾಗ: ಭೌಳಿ**

ಆದಿತ್ಯನೆ ನೀ ಲೋಕವ ಬೆಳಗುವೆ। ಸಕಲ ಜೀವಿಗೆ ಪ್ರಾಣವ ಕೊಡುವೆ॥ಪ॥ ಜಗದ ಸೃಷ್ಟಿಯ ಆದಿಯಿಂದಲು। ಆರಾಧ್ಯದೈವನಾಗಿ ರಾರಾಜಿಸಿರುವೆ। ದೇವಾದಿದೇವರಿಂದ ಪೂಜಿಸಲ್ಪಡುವೆ। ತಿಮಿರಾಂಧಕಾರವ ಹೊಡೆದೋಡಿಸುವೆ ॥1॥ ನಿನ್ನ ತೇಜದಿಂದ ಚೈತನ್ಯ ಮೂಡಿಹುದು। ಸೃಷ್ಟಿಯ ಕಾರ್ಯಕೆ ನೆರವಾಗುವುದು। ಪ್ರಕೃತಿ ಸೊಬಗು ನೂರ್ಮಡಿ ಯಾಗುವುದು। ಫಲಪುಷ್ಪಗಳು ಗಿಡಮರ ತಬ್ಬಿಹುದು॥2॥ ಆತ್ಮವನು ಬೆಳಗುವೆ ಆತ್ಮಜ್ಯೋತಿಯು ಆಗಿ। ಆನಂದ ಕೊಡುವೆ ಎಲ್ಲರಿಗೂ ಸಮನಾಗಿ। ವೈವಿಧ್ಯಮಯ ರಂಗು ನಿನ್ನ ಕಿರಣದೊಳಿಹುದು। ಚೈತನ್ಯದಾಸನ ಮನವ ತುಂಬಿಹುದು॥3॥

ಸೂರ್ಯನೇ ಶಿವ ಸ್ವರೂಪನೆ **ರಾಗ: ಮಲಯಮಾರುತ-ಆದಿತಾಳ**

ಸೂರ್ಯನೇ ಶಿವ ಸ್ವರೂಪನೆ। ಶುದ್ಧ ತಿಲಕ ಪರಂಜ್ಯೋತಿಯೆ ರವಿಯೆ॥ಪ॥ ಉಜ್ವಲನೇ ಪ್ರಭು ಊರ್ಧ್ವಕಾಯನೆ। ವಸುಧೇ ಅಂಡಚರಾಚರಾಧಿಪನೆ॥ಅ.ಪ॥ ಸಿಂಹರಾಶಿಯಲಿ ಮೆರೆವಂಥವನೇ। ಕಾಶ್ಯಪಗೋತ್ರನೇ ಕಾಂತಿದಾಯಕನೆ। ಆದಿತ್ಯನಾಥನೇ ಪಾರ್ಥಶರಣ್ಯನೆ। ಅರುಣನೇ ಕರುಣನೇ। ಸೂರ್ಯನಾರಾಯಣನೇ॥1॥

ಸೂರ್ಯದೇವನ ಭಜಿಸೋ **ರಾಗ: ವಸಂತ**

ಸೂರ್ಯದೇವನ ಭಜಿಸೋ। ಎಲೆ ಮನುಜ ಸೂರ್ಯದೇವನ ಭಜಿಸೊ॥ಪ॥ ಸೂರ್ಯನಿಂದಲೆ ಜಗ ಬೆಳಗುತಲಿಹುದು। ಸೂರ್ಯನಿಂದಲೆ ಸೃಷ್ಟಿ ಸಾಗುತಲಿಹುದು। ಸೂರ್ಯನೆ ನಮಗೆಲ್ಲ ಪ್ರತ್ಯಕ್ಷ ದೈವವು। ಸೂರ್ಯಗೆ ನಮಿಸುತ ಬದುಕೆಲೊ ಜೀವ॥1॥ ರಥಸಪ್ತಮಿಯಂದು ರಥವೇರಿ ಬರುವನು। ಸಪ್ತಸಾಗರದಲಿ ದರುಶನವೀವನು। ಸಪ್ತಋಷಿಗಳಿಂದ ಪೂಜಿಸಲ್ಪಡುವನು। ಸಪ್ತ ಅಶ್ವಗಳಿಂದ ರಥವೇರಿ ಬರುವನು॥2॥ ನಾನು ನೀವು ಧನ್ಯರು ಜಗವು ಧನ್ಯಮಾನ್ಯವು। ನಿತ್ಯ ಎಮಗೆ ಕಾಣುವಂತ ಸೂರ್ಯದೇವನಿರುವನು। ಆತನನ್ನು ಜಪಿಸಿ ಭಜಿಸಿ ಇಷ್ಟಕಾಮ್ಯ ಪಡೆಯುವ। ಚೈತನ್ಯದಾಸ ನಮಿಸಿನುತಿಸಿ ಧನ್ಯತೆಯ ಪಡೆಯುವ॥3॥

ನೆನೆಯಬಾರದೆ ಒಮ್ಮೆ **ರಾಗ: ಶುಭಪಂತುವರಾಳಿ**

ನೆನೆಯಬಾರದೆ ಒಮ್ಮೆ ಪರಮ ಪಾವನನ। ಘನಪರಂಜ್ಯೋತಿ ಸೂರ್ಯನಾರಾಯಣನಾ। ಲೋಕಾದಿ ಲೋಕವ ತಿರುಗಿ ಬರುವವನಾ। ಸಾಕಾರದಿಂದ ಸರ್ವರ ನೋಡುತಿಹನಾ॥1॥ ಬ್ರಹ್ಮಾಂಡಕೋಟಿ

ಪುರವ ತಿರುಗಿ ಬರುವವನಾ। ಒಮ್ಮೆ ನೆನೆವವರ ಪಾಪ ಕಳೆವವನಾ। ಧರ್ಮಕ್ಕೆ ಸಾಕ್ಷಿರೂಪವಾಗಿ ಸುಳಿಯುವವನಾ। ನಿರ್ಮಲಾತ್ಮಕ ಸೂರ್ಯನಾರಾಯಣನಾ॥2॥ ಮೂರ್ತಾಮೂರ್ತದೊಳಗೆ ದಿವ್ಯರೂಪ ತಾಳಿದವನಾ। ಪ್ರತಿ ಶುದ್ಧದಿಂದ ಸರ್ವರ ನೋಡುತಿಹನಾ। ತತ್ತ್ವ ಮಹಾಜ್ಯೋತಿ ಗುಣನೆನಿಸುವನಾ। ಪ್ರತ್ಯಕ್ಷವಾದ ಸೂರ್ಯನಾರಾಯಣನಾ॥3॥ ಧರೆಗೆ ನಯನವಾಗಿ ಮುಕುಟವಾಗಿಹನಾ। ತರುಣಿಗ್ವಲಿದು ಲಜ್ಜೆಯ ಕಾಯ್ದವನಾ। ಉದಯ ಕಾಲದೊಳಿಂದ ಪ್ರಭೆಯ ಬೀರುವನಾ। ನಿಜವ ತೋರುವ ಸೂರ್ಯನಾರಾಯಣನಾ॥4॥ ಧರಿಸಿಹ ಪಂಚಭೂತಾತ್ಮನಾಗಿಹನಾ। ಸರಸಿಜ ಮಿತ್ರನಾಗಿ ತಾನೊಪ್ಪುತಿಹನಾ। ಹರುಷದಿ ನೆನೆವವರ ಪಾಪ ಕಳೆಯುವವನಾ। ಪಂಚಮೂರುತಿ ಸೂರ್ಯನಾರಾಯಣನಾ॥5॥

ಮೂಡುವನು ರವಿ — **ರಾಗ: ಶುಭಪಂತುವರಾಳಿ**

ಮೂಡುವನು ರವಿ ಮೂಡುವನು ಕತ್ತಲೊಡನೆ ಜಗಳಾಡುವನು। ಮೂಡಣ ರಂಗಸ್ಥಳದಲಿ ನೆತ್ತರು ಮಾಡುವನು ಕುಣಿದಾಡುವನು॥ಪ॥ ಬೆಳಕಿನ ಕಣ್ಣುಗಳಿಂದಾ ಸೂರ್ಯನು ನೋಡುವನು ಬಿಸಿಲೂಡುವನು। ಚಿಲಿ ಪಿಲಿ ಹಾಡನು ಹಾಡಿಸಿ ಹಕ್ಕಿಯ ಗೂಡಿನ ಹೊರ ಹೊರದೂಡು ವನು॥1॥ ಬಂಗಾರದ ಚೆಲು ಬಿಸಿಲ ಕಿರೀಟದ ಶೃಂಗಾರದ ತಲೆಎತ್ತುವನು। ತೆಂಗಿನ ಕೌಂಗಿನ ತಾಳೆಯ ಬಾಳೆಯ ಅಂಗಕೆ ರಂಗನು ಮೆತ್ತುವನು॥2॥ ಮಾಡಿನ ಹುಲ್ಲಲಿ ಚಿನ್ನದ ಗೆರೆಯನು ಎಳೆಯುವನು ರವಿ ಎಳೆಯುವನು। ಕೂಡಲೆ ಕೋಣೆಯ ಕತ್ತಲೆ ಕೊಳೆಯನು ತೊಳೆಯುವನು ರವಿ ಹೊಳೆಯುವನು॥3॥ ಮಲಗಿದ ಕೂಸಿನ ನಿದ್ದೆಯ ಕಸವನು ಗುಡಿಸುವನು ಕಣ್ ಬಿಡಿಸುವನು। ಹುಲು ಗಿಡ ಹೂವಿಗೆ ಪರಿ ಪರಿ ಬಣ್ಣವ ಉಡಿಸುವನು ಹನಿ ತೊಡಿಸುವನು॥4॥ ಏರುವನು ರವಿ ಏರುವನು, ಬಾನೊಳು ಸಣ್ಣಗೆ ತೋರುವನು। ಏರಿದವನು ಚಿಕ್ಕವನಿರಬೇಕಲೆ ಎಂಬಾ ಮಾತನು ಸಾರುವನು॥5॥

ನಮಸ್ಕಾರ ಮಾಡುವೆ ನಿಮಗೆ ಭಾಸ್ಕರ

ನಮಸ್ಕಾರ ಮಾಡುವೆ ನಿಮಗೆ ಭಾಸ್ಕರ। ಸಮಸ್ತ ದೇವರಿಗೆಲ್ಲ ಸುಲಭ ಶ್ರೀಸೂರ್ಯದೇವ॥ಪ॥ ಪೂರ್ವದಿಕ್ಕಿನಲ್ಹುಟ್ಟಿ ಭೋರೆಂಬೋ ರಥವೇರಿ ಭೋರೇಂಬೋ ರಥವೇರಿ ಗಾರೆಂಬೋ ಕುದುರೆ ಅರುಣಸಾರಥಿ। ಬಾರಿಯಾಗಿರುವೋ ಹೆಗ್ಗಾಲಿಯ ರಥವೇರಿ। ಮೇರುಗಿರಿಯ ಸುತ್ತಿ ಬರುವ ಶ್ರೀ ಸೂರ್ಯದೇವ॥1॥ ಉದಯ ಕಾಲದೊಳೆದ್ದು ವರ್ಚಸ್ವರೂಪತಾಳಿ। ಮಧ್ಯಾಹ್ನ ಕಾಲಕ್ಕೆ ರುದ್ರರೂಪ ಆದಿಮೂರುತಿ ಅಸ್ತಮಾನಕ್ಕೆ ವಿಷ್ಣುರೂಪ। ತೇಜದಿಂದಲಿ ಮೆರೆದು ಬರುವ ಶ್ರೀ ಸೂರ್ಯದೇವ॥2॥ ಬೇಡಿದಿಷ್ಟಾರ್ಥವ ಬೇಗ ಕೊಡುವಿರಂತೆ। ನಾಡದೈವಗಳಂತೆ ಕಾಡಿಸದೇ। ರೂಢಿಯೊಳಗೆ ನಿಮ್ಮ ತೇಜ ಮೆರೆಯುತಲಿದೆ। ರೂಢಿಗೊಡೆಯನಾದಂಥ ಸುಲಭ ಶ್ರೀ ಸೂರ್ಯದೇವ॥3॥

ಸೂರ್ಯ ಭಗವನ್ — **ರಾಗ: ಭೌಳಿ-ಖಂಡಛಾಪುತಾಳ**

ಸೂರ್ಯ ಭಗವನ್ ನಮೋಸ್ತುತೇ ಪರದೇವತೆ॥ಪ॥ ಪ್ರಾತಃಕಾಲ ಸ್ಮರಾಮ್ಯಹಂ ಸಂಧ್ಯಾಕಾಲ ವಂದನೀಯಂ। ಸಪ್ತರಥ ಆರೂಢ ಭಗವಂತಂ ನಮೋ ನಮಾಮಿ॥1॥ ಛಾಯಾಪತಿ ನವಗ್ರಹಪಿತ ಸಕಲ ಭುವನ ರಕ್ಷಕ ಆದಿತ್ಯ ನಮೋ ನಮೋ ಶನಿಗ್ರಹಪಿತ। ಸರ್ವಜನಪಾಲಕ ಸೂರ್ಯಭಗವನ್ ನಮೋ ನಮಾಮಿ॥2॥

ನಮೋಸ್ತು ಭಾನುವೇ ನತಕಾಮಧೇನುವೇ — **ರಾಗ: ಭೌಳಿ**

ನಮೋಸ್ತು ಭಾನುವೇ ನತಕಾಮಧೇನುವೇ॥ಪ॥ ಶೋಕಮಿಥುನ ಹೃದಯಜಾತ ಶೋಕಹಾರಿಣೇ। ಪಾಕಶಾಸನಾದಿ ದೇವ ಪೋಷಕಾರಿಣೆ॥1॥ ವಿಮಲ ನೈಜಧಾಮಘನ ತಿಮಿರ ಪೋಷಿಣೆ। ಅಮಿತ ತುಹಿನ ವದನ ಕಾಂತ ಕಮಲ ಪೋಷಿಣೇ॥2॥ ಸರಸಿಜಾಸ ನಂದಿನಿ ಕರವರ ತನುಜುವೇ। ಪರಮಭಕ್ತ ಜನವಿರಚಿತ ಪಾಪ ಜಯಮುವೇ॥3॥

ವಂದಿಸುವೆನು ನಾ ಸೂರ್ಯದೇವ **ರಾಗ: ಪುನ್ನಾಗವರಾಳಿ**

ವಂದಿಸುವೆನು ನಾ ಸೂರ್ಯದೇವ। ವನರುಹ ಸಖ-ಸುರ ವಿನುತ ಪ್ರಭಾವ॥ಪ॥ ಲೋಕವ ಬೆಳಗುವ ನಿರುಪಮ ತೇಜ। ಶ್ರೀಕರ ಮಹಿಮಾಕರ ದಿನರಾಜ॥ ಜಲಧಿಯ ಜಲವಂ ಗ್ರಹಿಸುತೆ ನೀನು। ಇಳೆಗುರು ಮಳೆಗರೆಯಿಸುತಿದೆ ಭಾನು॥1॥ ವನೌಷಧಿಗಳಂ ನಿಪರ್ದಿಪರುಣಾ। ವಿನುತಾ ಧರಣಾ ವಿಶಾಲಕಿರಣಾ॥ ಕಾಲಾಧಾರಾ ಹರಿಪದ ಚಾರಾ। ಕರಹರನಿಕರಾ ಕಾವುದು ಹಿಮಕರ॥2॥ ಬೆಳೆಗಳ ಬೆಳೆಯಿಸಿ ಫಲಗಳ ನೀವೇ। ಅಲರ್ಗಳನರಳಿಸಿ ಹರುಷವಗೈವೇ॥ ನರರಿಗೆ ಘನ ಸುಖ ಮೋಹವ ತರುವೇ। ಪರಿಪರಿ ರುಜೆಯನಿವಾರಿಸಿ ಪೊರೆವೇ॥3॥ ಪ್ರಭಾವ ತರಣ। ಪ್ರಪಂಚ ಕಿರಣ। ಶುಭ ಪ್ರಸರಣ ಪ್ರಪಂಚ ಶರಣ॥ ತಮವನು ನೀಗಿ ಬೆಳಕನು ನೀಡಿ। ಕಮಲಂಗಳನರಳಿಸುತಿಹೆ ನೋಡಿ॥4॥ ಸಕಲ ಕಲಾಮಯ ಸಾರ ಸಮಿತ್ರಾ। ಶುಭಕರ ಲೀಲಾ ಕರಸುಪವಿತ್ರಾ॥ ಕಾಂತಿ ಕಲಾಪ ಕಲಿತ ಪ್ರತಾಪಾ। ಭ್ರಾಂತಿ ನಿವಾರಕ ನಿರುಪಮ ದೀಪಾ॥5॥ ಮಂಗಳದಾತಾ ಮನುಮುನಿಗೀತಾ। ತುಂಗಕೃಪಾನ್ವಿತ ಶುಭಕರ ಚರಿತಾ॥5॥ ದೀನಾಧಾರಾ ದಿವ್ಯಾಕರಾ। ಜ್ಞಾನಗಾರಾ ಜಗದಾಧಾರಾ॥6॥

ವಂದಿಸುವೆವು ಸೂರ್ಯದೇವ **ರಾಗ: ಭೌಳಿ**

ವಂದಿಸುವೆವು ಸೂರ್ಯದೇವ। ಅಂಧಕಾರವನಳಿಸು ಬಾ ಸೂರ್ಯದೇವ॥ ಭಕ್ತರಾಧೀನ ನೀ ಸೂರ್ಯದೇವ। ಶಕ್ತಿಯ ನೀಡು ಬಾ ಸೂರ್ಯದೇವ॥1॥ ಕಾಲ ಚಕ್ರವ ತಿರುಗಿಸುವ ಸೂರ್ಯದೇವ। ಓಡಿಸುವೆ ಸುಖ ದುಃಖ ಸೂರ್ಯದೇವ॥ ಅಂಬರವು ತಾಮ್ರವರ್ಣವಾಯಿತು ಸೂರ್ಯದೇವ। ಇಂಬಿನಲಿ ಹರಡಿಸು ಕಿರಣಗಳ ಸೂರ್ಯದೇವ॥2॥ ಏಳು ಹಯಗಳ ರಥವೇರಿ ನಡೆವ ಸೂರ್ಯದೇವ। ಏಳೆಂದು ಪ್ರಾಣ ಜೀವರಾಶಿಗೆ ಇತ್ತ ಸೂರ್ಯದೇವ॥ ಜನ್ಮ ಕಾರಣನಾದೆ ಕರ್ಣಂಗೆ ಸೂರ್ಯದೇವ। ಮನ್ಮನೋರಥವೇರಿ ಕರುಣಿಸು ಸೂರ್ಯದೇವ॥3॥

ಸ್ವಾಮಿ ದೇವನೆ ಲೋಕ ಪಾಲನೆ **ರಾಗ: ಕೇದಾರಗೌಳ**

ಸ್ವಾಮಿ ದೇವನೆ ಲೋಕ ಪಾಲನೆ ತೇ ನಮೋಸ್ತು ನಮೋಸ್ತುತೇ। ಪ್ರೇಮದಿಂದಲಿ ನೋಡು ನಮ್ಮನು ತೇ ನಮೋಸ್ತು ನಮೋಸ್ತುತೇ॥ ನೇಮಿಸೆಮ್ಮೊಳು ಧರ್ಮ ಮಾರ್ಗವ ತೇ ನಮೋಸ್ತು ನಮೋಸ್ತುತೇ। ಕ್ಷೇಮದಿಂದಲಿ ಪಾಲಿಸೆಮ್ಮನು ತೇ ನಮೋಸ್ತು ನಮೋಸ್ತುತೇ॥1॥ ದೇವ ದೇವನೆ ಹಸ್ತಪಾದಗಳಿಂದಲೂ ಮನದಿಂದಲೂ। ನಾವು ಮಾಡಿದ ಪಾಪವೆಲ್ಲವ ಹೋಗಲಾಡಿಸು ಬೇಗನೆ। ಕಾವರಿಲ್ಲವು ನಿನ್ನ ಬಿಟ್ಟರೆ ಸೂರ್ಯನೇ ಜಗದೀಶನೆ। ಜೀವಕೋಟಿಯು ನಿನ್ನ ಈ ಬೆಳಕಿಂದ ಜೀವಿಪುದಲ್ಲವೇ॥2॥ ರಾತ್ರಿ ನಿದ್ರೆಯ ಗೈವ ಕಾಲದಿ ನಿತ್ಯವೆಮ್ಮನು ಕಾಯ್ದೆಯೈ। ಮಿತ್ರನೆಂಬುವ ನಾಮಧೇಯವು ಸತ್ಯವಾದುದು ನಿನ್ನೊಳು। ಸ್ತೋತ್ರ ಮಾಡುವ ಹಾಗೆ ನಿನ್ನನು ಪಕ್ಷಿಗಳ್ ಧ್ವನಿಗೈಯ್ಯುವೈ। ಚಿತ್ರಭಾನುವೆ ನೋಡಿ ನಿನ್ನನು ಎಲ್ಲಿ ಪೋದುದೊ ಕತ್ತಲೆ॥3॥ ಉತ್ತಮೋತ್ತಮ ನಿನ್ನ ಪಾದದ ಭಕ್ತಿಯೇ ಸ್ಥಿರವಲ್ಲವೇ। ಚಿತ್ತವೆಂಬುದು ಗಾಳಿಯಲ್ಲಿಯ ದೀಪದಂದದಿ ಚಲಿಪುದು। ಮತ್ತರಾಗುತ ಬಿಟ್ಟು ನಿನ್ನನು ಕೆಟ್ಟ ಯೋಚನೆ ಗೈಯದ। ಚಿತ್ತವನ್ನೆಮಗಿತ್ತು ರಕ್ಷಿಸು ಪದ್ಮನಾಭ ಸುರೇಶನೇ॥4॥ ಆಡುವಾಗಲು ನಾವು ಭೋಜನ ಮಾಡುವಾಗಲು ಸರ್ವದಾ। ನೋಡಿ ನೀ ದಯದಿಂದಲೆಮ್ಮನು ಪಾಲಿಸೈ ಭಗವಂತನೆ। ಬೇಡಿ ಕೊಂಬೆವು ನಮ್ಮ ದೇಹಕೆ ಸೌಖ್ಯಮಂ ಬಲಪುಷ್ಟಿಯಂ। ನೀಡು ನಿನ್ನಯ ಪಾದಭಕ್ತಿ ಯನೆಂದಿಗೂ ಬಿಡದೆಮ್ಮೊಳು॥5॥ ನಿನ್ನ ದರ್ಶನ ಗೈದಮಾತ್ರದಿ ಜನ್ಮ ಸಾರ್ಥಕವಲ್ಲವೇ। ನಿನ್ನ ಪೂಜಿಪ ಹಸ್ತವೇ ಬಹು ದೊಡ್ಡದಲ್ಲವೆ ದೇವನೆ। ನಿನ್ನ ನಾಮವ ಪೇಳ್ವ ನಾಲಗೆ ಧನ್ಯವಲ್ಲವೆ ಲೋಕದಿ। ನಿನ್ನ ಧ್ಯಾನಿಪ ಚಿತ್ತವೃತ್ತಿಯು ಯೋಗ್ಯವಲ್ಲವೆ ಲೋಕದಿ॥6॥ ನೀನೆ ತಾಯಿಯು ನೀನೆ ತಂದೆಯು ನೀನೆ ನಮ್ಮೊಡನಾಡಿಯು। ನೀನೆ ಬಂಧುವು ನೀನೆ ಭಾಗ್ಯವು ನೀನೆ ವಿದ್ಯೆಯು ಬುದ್ಧಿಯು। ನೀನು ಪಾಲಿಸದಿದ್ದೊಡೆಮ್ಮನು ಬೇರೆ ಪಾಲಿಪರಿಲ್ಲವೈ। ದೀನಪಾಲನೆ ನಿನ್ನಧೀನದೊಳಿರ್ಪ ಎಮ್ಮನು ಪಾಲಿಸೈ॥7॥ ಶ್ರೀಮುಕುಂದನೆ ಭೂಮಿಯಲ್ಲಿಯು ನೀರಿನಲ್ಲಿಯು ನೀನಿಹೆ। ವ್ಯೋಮದಲ್ಲಿಯು ಗಾಳಿಯಲ್ಲಿಯು ತೇಜದಲ್ಲಿಯು ನೀನಿಹೆ॥ ರಾಮನೂ ನರಸಿಂಹನೂ ಪರಮಾತ್ಮ ಕೃಷ್ಣನೂ ನೀನೆಲೈ। ನೀ ಮಹಾತ್ಮನು ಎಮ್ಮ ತಪ್ಪುಗಳೆಲ್ಲ ಮನ್ನಿಸಿ ಪಾಲಿಸೈ॥8॥

ಸಂಕ್ರಮಣ ನಿನಗಂತೆ ರಾಗ: ಭೌಳಿ

ಸಂಕ್ರಮಣ ನಿನಗಂತೆ ನೀ ತಿರುಗುತಿಹೆಯಂತೆ। ದಕ್ಷಿಣಾಯನದಿಂದ ಉತ್ತರಾಯಣದೆಡೆಗೆ। ಮುಸುಕಿದ್ದ ಮಬ್ಬುಗಳ ಅತ್ತಿತ್ತ ಸರಿಸುತ್ತ। ಕರೆದೊಯ್ಯುತಿಹೆ ನಮ್ಮ ಬೆಳಕಿನೆಡೆಗೆ॥ಪ॥ ಧನುರಾಶಿಯಾ ತೊರೆದು ಮಕರರಾಶಿಯ ಎಡೆಗೆ। ಪಯಣ ನಿನದಂತೆ ನೀ ಮರೆಯದಿರುವೆ। ಯಾವ ರಾಶಿಯ ನೀನು ಹೊಕ್ಕು ಚಲಿಸಿದರೇನು। ಕಾಣೋ ಧರಣಿಗೆ ನೀನು ಅಲ್ಲೇ ಇರುವೆ॥1॥ ಕೊರೆವ ಹೇಮಂತನನು ಮತ್ತೆ ಸಖ ಶಿಶಿರನನು। ಓಲೈಸಿ ವಸಂತನ ಕರೆದು ತರುವೆ। ಕಾಡೋ ಚಳಿ ಇಳಿಸುತ್ತ ಇಳೆಗೆ ರಂಗನು ತುಂಬಿ। ನಗುನಗುವ ಚೈತ್ರದೆಡೆ ಕರೆದೊಯ್ಯುವೆ॥2॥ ಪುಣ್ಯಕಾಲವು ಇದುವು ಧರ್ಮದಲಿ ನಡೆವರಿಗೆ। ಸ್ನಾನ ಜಪತಪಗಳಾಚರಣೆಯಂತೆ। ಎಳ್ಳುಬೆಲ್ಲವ ಹಂಚಿ ಒಳ್ಳೆ ಮಾತುಗಳಾಡಿ। ಸ್ವಸ್ಥ್ಯ ಸ್ನೇಹವ ಬೆಳೆಸಿರೆಂದುಸಿರುತಿಹೆಯಂತೆ॥3॥ ಬಂದೆ ಬರುವುದು ವರ್ಷಕೊಂದಾವರ್ತಿ। ಸುಖ-ಶಾಂತಿ ಸಮೃದ್ಧಿ ಹೊತ್ತ ಸಂಕ್ರಾಂತಿ। ಮನುಜಮತಿ ಬೆಳೆಯಲಿ ಪಚ್ಚೆ ಪೈರಿನ ರೀತಿ। ಅಳಿಯಲಿ ಕಳೆಯಲಿ ತಲ್ಲಣಗಳಾ ಭ್ರಾಂತಿ॥4॥

ಸಪ್ತಾಶ್ವ ರೂಢಂ ನಕ್ಷತ್ರ ಮೂಲಂ ರಾಗ: ಭೌಳಿ

ಸಪ್ತಾಶ್ವ ರೂಢಂ ನಕ್ಷತ್ರ ಮೂಲಂ। ಕೋಟಿ ಕಿರಣ ಭಾಸ್ಕರಾಯ॥1॥ ಶ್ವೇತವರ್ಣಂ ಸ್ಪಟಿಕಾ ಶೀಲಂ। ಅಗ್ನಿವರ್ಣಂ ಭಾಸ್ಕರಾಯ॥2॥ ಪ್ರಥಮಿತ ವಿಷ್ಣುಂ ಮಧ್ಯತ ಶಂಭುಂ। ಅಂತ್ಯ ಬ್ರಹ್ಮ ಭಾಸ್ಕರಾಯ॥ ಛಾಯ ಲೋಲಂ ಚಂದ್ರ ಪಾಲಂ। ಗಗನ ಸಂಚಾರಿ ಭಾಸ್ಕರಾಯ॥3॥ ಶ್ವೇತರಾಗಂ ಪೂರ್ಣಾದಾರಂ। ಅಷ್ಟಮಹಸ್ತಂ ಭಾಸ್ಕರಾಯ॥4॥ ಧಗ ಜ್ವಾಲಂ ದಗ್ಧ ಜ್ವಾಲಂ। ಪ್ರಜ್ವಾಲಂಕೃತ ಭಾಸ್ಕರಾಯ॥ಸ॥ ಅಗ್ನಿ ವಸ್ತ್ರಂ ಸಚ್ಚಿದಾನಂದಂ। ಸಚ್ಚಿದಾನಂದಂ ಭಾಸ್ಕರಾಯ॥5॥

ಓಂ ಹ್ರಾಂ ಮಿತ್ರಾಯ ನಮಃ (ಸೂರ್ಯನ ದ್ವಾದಶನಾಮಗಳು)

ಓಂ ಹ್ರಾಂ ಮಿತ್ರಾಯ ನಮಃ। ಓಂ ಹ್ರೀಂ ರವಯೇ ನಮಃ। ಓಂ ಹ್ರೂಂ ಸೂರ್ಯಾಯ ನಮಃ। ಓಂ ಹ್ರೈಂ ಭಾನವೇ ನಮಃ। ಓಂ ಹ್ರಾಂ ಖಗಾಯ ನಮಃ। ಓಂ ಹ್ರಃ ಪೂಷ್ಣೇ ನಮಃ। ಓಂ ಹ್ರಂ ಹಿರಣ್ಯಗರ್ಭಾಯನಮಃ। ಓಂ ಹ್ರಾಂ ಆದಿತ್ಯಾಯ ನಮಃ। ಓಂ ಹ್ರೈಂ ಸವಿತ್ರೇ ನಮಃ। ಓಂ ಹ್ರೂಂ ಭಾಸ್ಕರಾಯ ನಮಃ। ಓಂ ಹ್ರೀಂ ಅರ್ಕಾಯ ನಮಃ। ಓಂ ಹ್ರಾಂ ಮರಿಚಯೇ ನಮಃ॥

ಆದಿತ್ಯಂ ಪ್ರಥಮಂ ನಾಮ ದ್ವಿತೀಯಂ (ಸೂರ್ಯದ್ವಾದಶನಾಮ)

ಆದಿತ್ಯಂ ಪ್ರಥಮಂ ನಾಮ ದ್ವಿತೀಯಂ ತು ದಿವಾಕರಮ್। ತೃತೀಯಂ ಭಾಸ್ಕರಂ ಪ್ರೋಕ್ತಂ ಚತುರ್ಥಂ ತು ಪ್ರಭಾಕರಮ್॥1॥ ಪಂಚಮ ಹರಿ ದಶ್ವಂ ಚ ಷಷ್ಠಂ ತ್ರೈಲೋಕ್ಯಲೋಚನಮ್। ಸಪ್ತಮಂ ತು ಸಹಸ್ರಾಂಶು ಮಷ್ಟಮಂ ತು ವಿಭಾಕರಮ್॥2॥ ನವಮಂ ಸ್ಯಾದ್ದಿನಕರಂ ದಶಮಂ ದ್ವಾದಶಾತ್ಮಕಮ್। ಏಕಾದಶಂ ತ್ರಿವೇದಾತ್ಮ ದ್ವಾದಶಂ ಸೂರ್ಯ ಮೇವಚ॥3॥ ದ್ವಾದಶೈತಾನಿ ನಾಮನಿ ಪ್ರಾತಃಕಾಲೇ ಸದಾ ಪಠೇತ್ ತಸ್ಯ ಕುಷ್ಠಾದಿ ಹೃದ್ರೋಗೋದಾರಿದ್ರ್ಯಂ ನೈವ ಜಾಯತೇ॥4॥ ಶ್ರೀ ಬ್ರಹ್ಮಾಂಡ ಪುರಾಣೇ ಸೂರ್ಯ ದ್ವಾದಶ ಸ್ತೋತ್ರಂ॥

ಆದಿದೇವ ನಮಸ್ತುಭ್ಯಂ ಪ್ರಸೀದ ಮಮ ಭಾಸ್ಕರ (ಸೂರ್ಯಾಷ್ಟಕಂ)

ಆದಿದೇವ ನಮಸ್ತುಭ್ಯಂ ಪ್ರಸೀದ ಮಮ ಭಾಸ್ಕರ। ದಿವಾಕರ ನಮಸುಭ್ಯಂ ಪ್ರಭಾಕರ ನಮೋಸ್ತುತೇ॥ ಸಪ್ತಾಶ್ವ ರಥ ಮಾರೂಢಂ ಪ್ರಚಂಡ ಕಶ್ಯಪಾತ್ಮ ಜಂ। ಶ್ವೇತಪದ್ಮ ಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಂ॥ ಲೋಹಿತಂ ರಥ ಮಾರೂಢಂ ಸರ್ವಲೋಕ ಪಿತಾಮಹಂ। ಮಹಾ ಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಂ॥ ತ್ರೈಗುಣ್ಯಂಚ ಮಹಾಶೂರಂ ಬ್ರಹ್ಮ ವಿಷ್ಣು ಮಹೇಶ್ವರಂ। ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಂ॥ ಬೃಂಹಿತಂ ತೇಜಸಾಂ ಪುಂಜಂ ವಾಯು ರಾಕಾಶ ಮೇವಚ। ಪ್ರಭುಸ್ತ್ವಂ ಸರ್ವಲೋಕಾನಾಂ ತಂ ಸೂರ್ಯಂ ಪ್ರಣಮಾಮ್ಯಹಂ॥ ಬಂಧೂಕಪುಷ್ಪ ಸಂಕಾಶಂ ಹಾರಕುಂಡಲಂ ಭೂಷಿತಂ। ಏಕಚಕ್ರಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಂ॥

ವಿಶ್ವೇಶಂ ವಿಶ್ವಕರ್ತಾರಂ ಮಹಾತೇಜಃ ಪ್ರದೀಪನಂ। ಮಹಾಪಾಪ ಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಂ॥ ಶ್ರೀವಿಷ್ಣುಂ ಜಗತಾಂನಾಥಂ ಜ್ಞಾನ ವಿಜ್ಞಾನ ಪ್ರಣಾಶನಂ। ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಂ॥ ಸೂರ್ಯಾಷ್ಟಕಮ್ ಪಠೇ ನಿತ್ಯಂ ಗ್ರಹಪೀಡಾ ಪ್ರಣಾಶನಂ। ಅಪುತ್ರೋಲಭತೇ ಪುತ್ರಂ ದರಿದ್ರೋ ಧನವಾನ್ ಭವೇತ್॥ ಅಮಿಷಂ ಮಧುಪಾನಂ ಚ ಯಃ ಕರೋತಿ ರವೇರ್ದಿನೇ। ಸಪ್ತ ಜನ್ಮ ಭವೇದ್ರೋಗಿ ಜನ್ಮ ಜನ್ಮ ದರಿದ್ರತಾ॥ಸ್ತ್ರೀ ತೈಲ ಮದು ಮಾಂಸಾನಿ ಯಸ್ತ್ಯಜೇತ್ತು ರವೇರ್ದಿನೇ। ನ ವ್ಯಾಧಿ ಶೋಕ ದಾರಿದ್ರಂ ಸೂರ್ಯಲೋಕಂ ಸ ಗಚ್ಛತಿ॥

ತತೋ ಯುದ್ಧ ಪರಿಶ್ರಾಂತಂ (ಆದಿತ್ಯಹೃದಯಮ್)

ತತೋ ಯುದ್ಧ ಪರಿಶ್ರಾಂತಂ ಸಮರೇ ಚಿಂತಯಾ ಸ್ಥಿತಂ। ರಾವಣಂ ಚಾಗ್ರತೋ ದೃಷ್ಟ್ವಾ ಯುದ್ಧಾಯ ಸಮುಪಸ್ಥಿತಂ॥1॥ ದೈವತೈಶ್ಚ ಸಮಾಗಮ್ಯ ದ್ರಷ್ಟು ಮಭ್ಯಾಗತೋ ರಣಂ। ಉಪಾಗಮ್ಯಾ ಬ್ರವೀದ್ರಾಮಮ್ ಅಗಸ್ತ್ಯೋ ಭಗವಾನ್ ಋಷಿಃ॥2॥ ರಾಮರಾಮ ಮಹಾಬಾಹೋ ಶೃಣು ಗುಹ್ಯಂ ಸನಾತನಂ। ಯೇನ ಸರ್ವಾನರೀನ್ ವತ್ಸ ಸಮರೇ ವಿಜಯಿಷ್ಯಸಿ॥3॥ ಆದಿತ್ಯಹೃದಯಂ ಸರ್ವಶತ್ರು ವಿನಾಶನಂ। ಜಯಾವಹಂ ಜಪೇನ್ನಿತ್ಯಂ ಅಕ್ಷಯಂ ಪರಮ ಶಿವಂ॥4॥ ಸರ್ವಮಂಗಲಮಾಂಗಲ್ಯಂ ಸರ್ವಪಾಪಪ್ರಣಾಶನಂ। ಚಿಂತಾಶೋಕ ಪ್ರಶಮನಂ ಆಯುರ್ವಧನ ಮುತ್ತಮಂ॥5॥ ರಶ್ಮಿಮಂತಂ ಸಮುದ್ಯಂತಂ ದೇವಾಸುರನಮಸ್ಕೃತಂ। ಪೂಜಯಸ್ವ ವಿವಸ್ವಂತಂ ಭಾಸ್ಕರಂ ಭುವನೇಶ್ವರಂ॥6॥ ಸರ್ವದೇವಾತ್ಮಕೋ ಹ್ಯೇಷ ತೇಜಸ್ವೀ ರಶ್ಮಿಭಾವನಃ। ಏಷ ದೇವಾಸುರಗಣಾನ್ ಲೋಕಾನ್ ಪಾತಿ ಗಭಸ್ತಿಭಿಃ॥7॥ ಏಷ ಬ್ರಹ್ಮಾ ಚ ವಿಷ್ಣುಶ್ಚ ಶಿವಃ ಸ್ಕಂದಃ ಪ್ರಜಾ ಪತಿಃ। ಮಹೇಂದ್ರೋ ಧನದಃ ಕಾಲೋ ಯಮಃ ಸೋಮೋ ಹ್ಯಪಾಂಪತಿಃ॥8॥ ಪಿತರೋ ವಸವಃ ಸಾಧ್ಯಾ ಹ್ಯಶ್ವಿನೌ ಮರುತೋ ಮನುಃ। ವಾಯುರ್ವಹ್ನಿಃ ಪ್ರಜಾಪ್ರಾಣ ಋತು ಕರ್ತಾ ಪ್ರಭಾಕರಃ॥9॥ ಆದಿತ್ಯಃ ಸವಿತಾ ಸೂರ್ಯ ಖಗಃ ಪೂಷಾ ಗಭಸ್ತಿಮಾನ್। ಸುವರ್ಣಸದೃಶೋ ಭಾನುಃ ಸ್ವರ್ಣ ರೇತಾ ದಿವಾಕರಃ॥10॥ ಹರಿದಶ್ವಃ ಸಹಸ್ರಾರ್ಚಿಃ ಸಪ್ತಸಪ್ತಿರ್ಮರೀಚಿಮಾನ್ ತಿಮಿರೋನ್ಮಥನಃ ಶಂಭುಃ ತ್ವಷ್ಟಾಮಾರ್ತಂಡ ಅಂಶುಮಾನ್॥11॥ ಹಿರಣ್ಯಗರ್ಭಃ ಶಿಶಿರಃ ತಪನೋ ಭಾಸ್ಕರೋ ರವಿಃ। ಅಗ್ನಿ ಗರ್ಭೋಽದಿತೇಃ ಪುತ್ರಃ ಶಂಖಃ ಶಿಶಿರನಾಶನಃ॥12॥ ವ್ಯೋಮನಾಥಸ್ತ ಮೋಭೇದೀ ಋಗ್ಯಜುಃ ಸಾಮಪಾರಗಃ। ಘನವೃಷ್ಟಿರಪಾಂಮಿತ್ರೋ ವಿಂಧ್ಯ ವೀಥೀಪ್ಲವಂಗಮಃ ॥13॥ ಆತಪೀ ಮಂಡಲೀ ಮೃತ್ಯುಃ ಪಿಂಗಲಃ ಸರ್ವತಾಪನಃ। ಕವಿರ್ವಿಶ್ವೋ ಮಹಾತೇಜಾ ರಕ್ತಃ ಸರ್ವಭವೋದ್ಭವಃ॥14॥ ನಕ್ಷತ್ರ ಗ್ರಹತಾರಾಣಾಂ ಅಧಿಪೋ ವಿಶ್ವಭಾವನಃ। ತೇಜಸಾಮಪಿ ತೇಜಸ್ವೀ ದ್ವಾದಶಾತ್ಮನ್ ನಮೋಸ್ತುತೇ॥15॥ ನಮಃ ಪೂರ್ವಾಯ ಗಿರಯೇ ಪಶ್ಚಿಮಾಯಾದ್ರಯೇ ನಮಃ। ಜ್ಯೋತಿರ್ಗಣಾನಾಂ ಪತಯೇ ದಿನಾಧಿ ಪತಯೇ ನಮಃ॥16॥ ಜಯಾಯ ಜಯಭದ್ರಾಯ ಹರ್ಯಶ್ವಾಯ ನಮೋ ನಮಃ। ನಮೋ ನಮಃ ಸಹಸ್ರಾಂಶೋ ಆದಿತ್ಯಾಯ ನಮೋ ನಮಃ॥17॥ ನಮಃ ಉಗ್ರಾಯ ವೀರಾಯ ಸಾರಂಗಾಯ ನಮೋ ನಮಃ। ನಮಃ ಪದ್ಮಪ್ರಬೋಧಾಯ ಮಾರ್ತಂಡಾಯ ನಮೋ ನಮಃ॥18॥ ಬ್ರಹ್ಮೇಶಾನಾಚ್ಯುತೇಶಾಯ ಸೂರ್ಯಾಯಾಽದಿತ್ಯ ವರ್ಚಸೇ। ಭಾಸ್ವತೇ ಸರ್ವಭಕ್ಷಾಯ ರೌದ್ರಾಯ ವಪುಷೇ ನಮಃ॥19॥ ತಮೋಘ್ನಾಯ ಹಿಮಘ್ನಾಯ ಶತ್ರುಘ್ನಾಯಾಮಿತಾತ್ಮನೇ। ಕೃತಘ್ನಾಯ ದೇವಾಯ ಜ್ಯೋತಿಷಾಂತಯೇ ನಮಃ॥20॥ ತಪ್ತಚಾಮೀಕರಾಭಾಯ ವಹ್ನಯೇ ವಿಶ್ವಕರ್ಮಣೇ। ನಮಸ್ತಮೋಽಭಿನಿಘ್ನಾಯ ರವಯೇ ಲೋಕ ಸಾಕ್ಷಿಣೇ॥21॥ನಾಶಯತ್ಯೇಷ ವೈ ಭೂತಂ ತದೇವ ಸೃಜತಿ ಪ್ರಭುಃ ಪಾಯತ್ಯೇಶ ತಪತ್ಯೇಶ ವರ್ಷತ್ಯೇಶ ಗಭಸ್ತಿಬಿಃ॥22॥ ಏಷ ಸುಪ್ತೇಶು ಜಾಗರ್ತಿ ಭೂತೇಷು ಪರಿನಿಷ್ಠಿತಃ ಏಷ ಏವಾಗ್ನಿ ಹೋತ್ರಂ ಚ ಫಲಂ ಚೈವಾಗ್ನಿ ಹೋತ್ರಿಣಾಂ॥23॥ ವೇದಾಶ್ಚ ಕ್ರತವಶ್ಚೈವ ಕ್ರತೂನಾಂ ಫಲಮೇವ ಚ ಯಾನಿ ಕೃತ್ಯಾನಿ ಲೋಕೇಷು ಸರ್ವಏಷ ರವಿಃ ಪ್ರಭುಃ॥24॥ ಏನಮಾಪತ್ಸು ಕೃಚ್ಛ್ರೇಷು ಕಾಂತಾರೇಷು ಭಯೇಷು ಚ। ಕೀರ್ತಯನ್ ಪುರುಷಃ ಕಶ್ಚಿತ್ ನಾವಸೀದತಿ ರಾಘವ॥25॥ ಪೂಜಯಸ್ವೈ ನಮೇಕಾಗ್ರೋ ದೇವದೇವಂ ಜಗತ್ಪತಿಂ। ಏತತ್ ತ್ರಿಗುಣಂ ಜಪ್ತ್ವಾ ಯುದ್ಧೇಷು ವಿಜಯಿಷ್ಯಸಿ ॥26॥ ಅಸ್ಮಿನ್ ಕ್ಷಣೇ ಮಹಾಬಾಹೋ ರಾವಣಂ ತ್ವಂ ವಧಿಷ್ಯಸಿ। ಏವಮುಕ್ತ್ವಾ ತತೋಗಸ್ತ್ಯೋ ಜಗಾಮ

ಸ ಯಥಾಗತಂ॥27॥ ಏತಚ್ಛ್ರುತ್ವಾ ಮಹಾತೇಜಾ ನಷ್ಟ ಶೋಕೋಭವತ್ತದಾ। ಧಾರಯಾ ಮಾಸ ಸುಪ್ರಿತೋ ರಾಘವಃ ಪ್ರಯತಾತ್ಮ ವಾನ್॥28॥ ಆದಿತ್ಯಂ ಪ್ರೇಕ್ಷ್ಯ ಜಪ್ತ್ವಾತು ಪರಂ ಹರ್ಷ ಮವಾಪ್ತವಾನ್। ತ್ರಿರಾಚಮ್ಯ ಶುಚಿರ್ಭೂತ್ವಾ ಧನುರಾದಾಯ ವೀರ್ಯವಾನ್ ॥29॥ ರಾವಣಂ ಪ್ರೇಕ್ಷ್ಯಹೃಷ್ಟಾತಾ ಯುದ್ಧಾಯ ಸಮುಪಾ ಗತಂ। ಸರ್ವಯತ್ನೇನ ಮಹತಾ ವಧೇ ತಸ್ಯಂ ಧೃತೋಽಭವತ್॥30॥ ಅಥ ರವಿರವ ದನ್ನಿರೀಕ್ಷ್ಯ ರಾಮಂ ಮುದಿತಮನಾಃ ಪರಮಂ ಪ್ರಹೃಷ್ಯಮಾಣಃ। ನಿಶಿಚರಪತಿ ಸಂಕ್ಷಯಂ ವಿದಿತ್ವಾ ಸುರಗಣ ಮಧ್ಯಗತೋ ವಚಸ್ತ್ವ ರೇತಿ॥31॥॥ಆದಿತ್ಯಹೃದಯಂ ಸಂಪೂರ್ಣಂ॥

ಮಂಗಳಂ ಶ್ರೀ ಭಾಸ್ಕರೇಶನೆ (ಮಂಗಳ)

ಮಂಗಳಂ ಶ್ರೀ ಭಾಸ್ಕರೇಶನೆ ಜಯತು ಜಯತು ಮಂಗಳಂ। ಶ್ರೀ ಛಾಯಾದೇವಿಗೆ॥ಪ॥ ಒಂದು ಗಾಲಿ ಹೂಡಿದ ರಥ ಅಂದಚೆಂದ ಮುಂದೆ ಕುಳಿತ। ಅರುಣ ಸಾರಥಿ ಹಾರ ಮುಕುಟ ಕಿರೀಟ ಕರ್ಣ ಕುಂಡಲವು। ಸಹಸ್ರ ಕಿರಣ ಜ್ವಾಲೆಯಿಂದ ಸ್ವಾಮಿ ಬರುವ ಪ್ರೇಮದಿಂದ॥1॥ ಓಂಕಾರರೂಪನೆನೆಸಿದ ಜಗಕ್ಕೆಲ್ಲ ಝೇಂಕಾರಿ ವಿಷ್ಣುವೆನಿಸಿದೆ। ಓಂಕಾರ ರೂಪನೆ ನೀನೇ ಜಗಕ್ಕೆಲ್ಲ ಝೇಂಕಾರಿ ವಿಷ್ಣುವೆನಿಸಿದೆ ನೀನೆ। ವೆಂಕಟಾದ್ರಿನಿಲಯ ನೀನೇ ಶಂಕರಸುತನು ನೀನೆ॥2॥ ಜನನ ಮರಣವಿಲ್ಲದಾತಗೆ ಜಗಕ್ಕೆಲ್ಲಾ ಜನನ ಮರಣವಾಗಿ ತೋರ್ಪಗೆ। ಜನನ ಮರಣವಿಲ್ಲ ದಾತಗೆ ನಿನಗೆ ಜಾತಿ ಭೇದವಿಲ್ಲ। ಜನನ ಮರಣ ಬಿಡಿಸು ಎನಗೆ ಮಹೇಶ್ವರಾದಿ ಸೂರ್ಯದೇವ॥3॥

❖ ❖ ❖

65. ಮಹಾಶಿವರಾತ್ರಿ

ಏಳಯ್ಯ ಪಾರ್ವತೀರಮಣ ಪಾವನ (ಉದಯರಾಗ) ರಾಗ: ಭೂಪಾಲ್

ಏಳಯ್ಯ ಪಾರ್ವತೀರಮಣ ಪಾವನ ಚರಣ ಏಳಯ್ಯ। ಫಣಿಕುಲಾಭರಣ ಪಾವಕ ನಯನ ಏಳಯ್ಯ। ಶರಣು ಜನಸಂಗ ಸದಾಪಾಂಗ ಏಳು ನಂಜುಂಡ। ಲಿಂಗಹರನೇ। ಏಳೈಯ್ಯ ಬೆಳಗಾಯಿತು॥1॥ ಕಮಲಸಂಭವ ಮುಖ್ಯ ವಿಮಲ ವಿಶ್ವಾಮಿತ್ರ। ಜಮದಗ್ನಿ ಕಶ್ಯಪ ವಸಿಷ್ಠ ಕಣ್ವಾದಿಗಳು। ಸುಮನತೆಯಿಂದ ಕಾದಿಹರು ಬಾಗಲ ಒಳಗೆ। ಉಮೆಯರಸ ನೀನೊಲಿದು ಪವಡಿಸಿದ್ದೆ। ಹರನೆ ಏಳಯ್ಯ ಬೆಳಗಾಯಿತು॥2॥ ಇಂದ್ರಾದಿ ಅಮರ ದಿಕ್ಪಾಲಕರೊಂದೆಸೆಯೊಳಗೆ। ವಂದಿಸುತ ನಾರದರು ನಲಿದು ಗಾನವ ಪಾಡೆ। ನಂದೀಶ ಭೃಂಗೀಶ ನಲಿದು ನಾಟ್ಯವಾಡುತಿಹರು। ಆನಂದದಿಂದ ಪವಡಿಸಿದ್ದೆ ಹರನೇ ಏಳಯ್ಯ ಬೆಳಗಾಯಿತು॥3॥

ಅರುಣೋದಯವಾಗುತಿದೆ (ಸುಪ್ರಭಾತ) ರಾಗ: ಶುಭಪಂತುವರಾಳಿ

ಅರುಣೋದಯವಾಗುತಿದೆ ಹಕ್ಕಿಗಳು ಕೂಗುತಿದೆ। ಸುಪ್ರಭಾತವು ನಿನಗೆ ಏಳಯ್ಯ ಚಂದ್ರಮೌಳೇಶ್ವರನೇ॥ ಏಳಯ್ಯ ಏಳಯ್ಯ॥1॥ ಓಂಕಾರ ಪ್ರಿಯ ಯೋಗಿ ಜನಪ್ರಿಯ ಬಿಲ್ವದಳ ಪ್ರಿಯ ಚಂದ್ರಮೌಳೇಶ್ವರ ದಾಸರೆಲ್ಲರು ನಿನ್ನ ಧೂಳಿ ದರುಶನಕೆಂದು ಬಾಗಿಲಲಿ ಕಾದು ನಿಂತಿಹರು ಏಳಯ್ಯ ಚಂದ್ರಮೌಳೇಶ್ವರ ಏಳಯ್ಯ ಏಳಯ್ಯ॥2॥ ಉದಯ ಕಾಲದಿ ಎದ್ದು, ತುಂಬುರು ನಾರದರು ಉದಯರಾಗವ ನಿನಗೆ ಹಾಡುತಿಹರು। ರಾಜಾಧಿರಾಜರು ಮಂತ್ರವನು ಪಠಿಸುತ। ವೇದ ಘೋಷದಿ ನಿನ್ನ ಎಚ್ಚರಿಸುವರು। ಏಳಯ್ಯ ಚಂದ್ರಮೌಳೇಶ್ವರ ಏಳಯ್ಯ ಏಳಯ್ಯ॥3॥ ಶಿವರಾತ್ರಿ ಶುಭದಿನದಿ ನಿನ್ನ ಪೂಜೆಗೆ ಎಂದು ಗಣಿಗಲೆ ದಾಸವಾಳ ಬಿಲ್ವದಳ ಫಲ ತಂದು ಕಾದಿಹರು। ಭಕ್ತ ವೃಂದರು ಧೂಪ ದೀಪವನು ಹಚ್ಚುತಾ। ಶಿವಶಿವ ಎಂದು ನಿನ್ನ ನಾಮವ ಪಠಿಸುತಿಹರು। ಏಳಯ್ಯ ಚಂದ್ರಮೌಳೇಶ್ವರ ಏಳಯ್ಯ ಏಳಯ್ಯ॥4॥ ನಾಲ್ಕು ಯಮದ ಪೂಜೆ ಮಾಡುತ ನಿನಗೆ ಶಿವರಾತ್ರಿ ಫಲ ನಿಡೋ ಶಿವಶಿವ ಎಂದು। ಸರ್ವರೂ ಭಕ್ತಿಯಲಿ ಬೇಡುತಲಿಹರು। ಕುಕ್ಕೇ ಸ್ವಾಮಿ ಪಿತನೇ ನೀನು ಏಳಯ್ಯ ಚಂದ್ರಮೌಳೇಶ್ವರ ಏಳಯ್ಯ ಏಳಯ್ಯ॥5॥

ಏಳು ಯೋಗೀಶ್ವರನೆ (ಸುಪ್ರಭಾತ) ರಾಗ: ಭೌಳಿ

ಏಳು ಯೋಗೀಶ್ವರನೆ ಏಳು ಶಿವಶಂಕರನೆ। ಏಳು ಏಳಯ್ಯ ಬೆಳಗಾಯಿತು॥ಪ॥ ಏಳು ಪರಮೇಶ್ವರನೆ ಏಳು ಅಭಯಂಕರನೆ। ಏಳು ಏಳಯ್ಯ ಬೆಳಗಾಯಿತು॥1॥ ಲೋಕ ನಾಯಕಿ ಶಿವೆಯು ನೊರೆ ಹಾಲು ತಂದಿಹಳು। ಏಳು ಏಳಯ್ಯ ಬೆಳಗಾಯಿತು॥2॥ ಜ್ಯಂಗಿ ಶೃಂಗಿಗಳೆಲ್ಲ ಸಭೆಯಲ್ಲಿ ಕಾದಿಹರು। ಏಳು ಏಳಯ್ಯ ಬೆಳಗಾಯಿತು। ಸ್ಕಂದ ಗಣಪರು ಬಂದು ನಿನಗಾಗಿ ನಿಂದಿಹರು। ಏಳು ಏಳಯ್ಯ ಬೆಳಗಾಯಿತು॥3॥ ಸಕಲ ಮುನಿಜನವೆಲ್ಲ ಶಿವಶಿವ ಎನ್ನುತಿದೆ। ಏಳು ಏಳಯ್ಯ ಬೆಳಗಾಯಿತು। ನಿನ್ನ ಒಡ್ಡೋಲಗದಿ ಸುರರೆಲ್ಲ ನೆರೆದಿಹರು। ಏಳು ಏಳಯ್ಯ ಬೆಳಗಾಯಿತು। ಹರಿ ಬ್ರಹ್ಮ ನಾರದರು ನಿನಗಾಗಿ ಕಾದಿಹರು। ಏಳು ಏಳಯ್ಯ ಬೆಳಗಾಯಿತು॥4॥ ಶಂಖನಾದವಗೈದು ನಿನ್ನ ದರ್ಶನ ತೋರು। ಏಳು ಏಳಯ್ಯ ಬೆಳಗಾಯಿತು। ನಂದಿ ವಾಹನನಾಗಿ ಬಂದು ನೀ ದಯತೋರು। ಏಳು ಏಳಯ್ಯ ಬೆಳಗಾಯಿತು॥5॥

ಎದ್ದೇಳು ಮಂಜುನಾಥ (ಉದಯರಾಗ)

ಎದ್ದೇಳು ಮಂಜುನಾಥ ಏಳು ಬೆಳಗಾಯಿತು। ಧರ್ಮದೇವತೆಗಳು ನಿನ್ನ ದರುಶನಕೆ ಕಾದಿಹರು। ಅಣ್ಣಪ್ಪ ಸ್ವಾಮಿಯು ನಿನ್ನ ಆಜ್ಞೆಗೆ ನಿಂದಿಹನು॥1॥ ಮುನಿಗಣಂಗಳು ಸ್ತೋತ್ರಮಾಡುತಿಹರು। ದೇವಾದಿ ದೇವತೆಗಳು ನಿನ್ನ ದರುಶನಕೆ ಕಾದಿಹರು॥2॥ ಮೃಗರಾಜನು ನಿನ್ನ ದರುಶನಕೆ ಬಂದಿಹನು। ಗಜರಾಜನು ನಿನಗೆ ಚಾಮರವ ಬೀಸುತಿಹನು। ನಿನ್ನ ಆಭರಣಗಳಿಗಾಗಿ ಆದಿ ಶೇಷನು ನಿನ್ನ ಸೇರಲು ಕಾತರಿಸುತಿಹನು॥3॥ ಸರಿಗಪದ ಗಪಧಪದಸ ಗರಿಧಸಗ ನಿಸಪಧಸ। ಸವಿಮಾತಿನ ಅರಗಿಣಿಯು ನಿನ್ನ ಧ್ಯಾನದಲಿಹುದು। ಪಾರಿವಾಗಳು ನಿನ್ನ ದರುಶನಕೆ ಕಾದಿಹವು॥4॥ ಹೆಗ್ಗಡೆಯ ದಂಪತಿಗಳು ನಿನ್ನಯ ಸೇವೆಗೆ ಕಾತರಿಸುತಿಹರು। ತಡವು ಏತಕೆ ಪ್ರಭುವೆ ದರುಶನವ ನೀಡೇಳು॥5॥ ನೇತ್ರಾವತಿಯಲ್ಲಿ ಮಿಂದು ಜನರು ವಿಧವಿಧದಿ ಸೇವೆಗಳ ಗೈಯುತ್ತಿಹರು। ಸರ್ವರಕ್ಷಕನು ನೀನು ದರುಶನವ ನೀಡೇಳು॥6॥ ವಿಪ್ರರೆಲ್ಲರು ಕೂಡಿ ವೇದ ಘೋಷಿಸುತಿಹರು। ಮೋಕ್ಷವನು ನೀಡೇಳು। ರವಿಯ ಕಿರಣವು ನಿನ್ನ ಮಹಾದ್ವಾರವನು ಬೆಳಗುತಿಹುದು। ದರುಶನವ ನೀಡೇಳು ಏಳು ಬೆಳಗಾಯಿತು ಏಳು ಬೆಳಗಾಯಿತು॥7॥

ವಂದೇ ಶಂಭು ಉಮಾಪತಿಂ

ವಂದೇ ಶಂಭು ಉಮಾಪತಿಂ ಸುರಗುರಂ ವಂದೇ ಜಗತ್ಕಾರಣಂ। ವಂದೇ ಪನ್ನಗ ಭೂಷಣಂ ಮೃಗಧರಂ ವಂದೇ ಪಶೂನಾಂಪತಿಂ॥ ವಂದೇ ಸೂರ್ಯ ಶಶಾಂಕ ವಹ್ನಿನಯನಂ ವಂದೇ ಮುಕುಂದಪ್ರಿಯ। ವಂದೇ ಭಕ್ತಜನಾಶ್ರಯಂ ಚ ವರದಂ ವಂದೇ ಶಿವಂ ಶಂಕರಂ॥

ಬರುತಲಿದೆ ಬರುತಲಿದೆ ಶಿವರಾತ್ರಿ ರಾಗ: ಹಂಸಾನಂದಿ-ಏಕತಾಳ

ಬರುತಲಿದೆ ಬರುತಲಿದೆ ಶಿವರಾತ್ರಿ। ಶಂಭೋ ಶಂಕರನ ಕೈಲಾಸವಾಸನ। ಪಾರ್ವತಿ ರಮಣನ ಭಜಿಸುವ ರಾತ್ರಿ॥ಪ॥ ನಂದಿವಾಹನನ ನಿಗಮಗೋಚರನ। ನರರನು ಪಾಲಿಪ ಅರುಣಾಚಲೇಶ್ವರನ। ಸ್ಮಶಾನವಾಸಿ ಸಾಂಬಶಂಕರನ। ಭಕ್ತರ ಕೋರಿಕೆಯ ಸುಲಭದಿ ನಡೆಸುವ॥1॥ ಜಾವಜಾವಕೆ ಶಿವಲಿಂಗಕೆ। ಅಭಿಷೇಕ ಅರ್ಚನೆ ಮಾಡುವ ಶಿವರಾತ್ರಿ। ಶಾರದಾ ದಾಸಿ ವಂದಿತ ಗಿರಿಜಾ। ರಮಣನ ಭಜಿಸುವ ಆನಂದದ ರಾತ್ರಿ॥2॥

ರಮ್ಯಕ ರಾತ್ರಿ ಶಿವರಾತ್ರಿ ರಾಗ: ಮೋಹನ-ಆದಿತಾಳ

ರಮ್ಯಕ ರಾತ್ರಿ ಶಿವರಾತ್ರಿ। ಭಕ್ತಿಯಸಾಧನೆ ಶಿವರಾತ್ರಿ। ಜ್ಞಾನ ಮಾರ್ಗಕೆ ಶಿವರಾತ್ರಿ। ಗುರುವಿನ ದರ್ಶನ ಶಿವರಾತ್ರಿ॥ಪ॥ ಓಂ ನಮಃ ಶಿವಾಯ। ಓಂ ನಮಃ ಶಿವಾಯ। ಓಂ ನಮಃ ಶಿವಾಯ। ಓಂ ನಮಃ ಶಿವಾಯ ॥1॥ ಇಂದಿನ ದಿನವೇ ಶಿವರಾತ್ರಿ। ವೈರಾಗ್ಯ ರಾತ್ರಿ ಶಿವರಾತ್ರಿ। ಆತ್ಮಲಿಂಗ ದರ್ಶನ ಶಿವರಾತ್ರಿ। ಪರಮೇಶ್ವರನ ಶಿವರಾತ್ರಿ॥2॥ ಕಂಸಲೋಲ ಶಿವರಾತ್ರಿ। ಕಾಶಿ ದರುಶನ ಶಿವರಾತ್ರಿ। ಭಸ್ಮ ವಿಲೋಲ ಶಿವರಾತ್ರಿ। ಭೂಲೋಕವಾಸಿಗೆ ಶಿವರಾತ್ರಿ॥3॥ ಭಕ್ತಿ ಮುಕ್ತಿ ಸಾಧನೆ ಶಿವರಾತ್ರಿ। ಪರಶಿವ ರೂಪ ಶಿವರಾತ್ರಿ। ಪವಿತ್ರ ರಾತ್ರಿ ಶಿವರಾತ್ರಿ। ಶಿವ ಭಕ್ತರಿಗೆ ಶಿವರಾತ್ರಿ॥4॥

ನಂಜನಗೂಡಿನಲ್ಲಿ ನಂಜುಂಡಸ್ವಾಮಿಗೆ — ರಾಗ: ಆನಂದಭೈರವಿ

ನಂಜನಗೂಡಿನಲ್ಲಿ ನಂಜುಂಡಸ್ವಾಮಿಗೆ। ಶಿವರಾತ್ರಿ ಉತ್ಸವವು ಈ ದಿನ। ಶಿವರಾತ್ರಿ ವೈಭವವು॥ಪ॥ ಕಪಿಲೆಯ ಕರೆಯಲಿ ನಿಂತಿರುವ ಈಶನಿಗೆ। ಬೆಳ್ಳಿರಥ ಉತ್ಸವವು ಈದಿನ। ನಂಜುಂಡಗೆ ವೈಭವವು॥ಅ.ಪ॥ ಬೆಳ್ಳಿ ಬೆಟ್ಟದಲ್ಲಿ ಸತಿಯಜೊತೆಗೂಡಿ। ನಿಂತವಗೆ ಹಾಲಿನಲಿ ಅಭಿಷೇಕ। ಗಂಗೆಯನ್ನು ಶಿರದಲ್ಲಿ ಹೊತ್ತು ನಿಂತ ದೇವನಿಗೆ। ಬಿಲ್ವಪತ್ರೆ ಅರ್ಚನೆಯು ಚರ್ಮಾಂಬರಧಾರಿಗೆ। ದೇವತ್ರಿಪುರಾರಿಗೆ ಕರ್ಪೂರದ ಆರತಿಯು। ತಂದೆಗೆ ಸಾವಿರಾರು ದಿವ್ಯಜ್ಯೋತಿಯು॥1॥ ಕಾಮನನ್ನು ಕೊಂದವಗೆ ವಿಷವನ್ನು ಉಂಡವಗೆ। ಶಾಲ್ಯಾನ್ನದ ನೈವೇದ್ಯ ಮೂರುಕಣ್ಣು ಉಳ್ಳವಗೆ। ಮೂರುಲೋಕ ಪಾಲಕ ಮಹಾರುದ್ರಗೆ ಮಂತ್ರಘೋಷ। ಜಾಗರಣೆ ಮಾಡುವೆ ರಾತ್ರಿ ಎಲ್ಲಾ ಭಜಿಸುವೆ। ತಂದೆ ನಂಜುಂಡೇಶ್ವರನೆ ನಮ್ಮನ್ನು ಕಾಯೊ ಪರಮೇಶ್ವರನೆ॥2॥

ಈಶ ಕೈಲಾಸವಾಸ — ರಾಗ: ನಾಟ

ಈಶ ಕೈಲಾಸವಾಸ ಕಾಶೀ ನಗರಾಧೀಶ॥ಪ॥ ವೇಷಭೂಷಣ ಗಿರೀಶ ವಿಶ್ವೇಶ ಚಿತ್ತವಾಸ॥ಅ.ಪ॥ ಶಿವಸಿದ್ಧ ಸಾಧ್ಯ ಸೇವ್ಯ ಭವವನಾತನ ದಿವ್ಯ। ಭವಮೂರ್ತಿ ಕೀರ್ತಿ ಭವ್ಯ। ಕವಿ ಪ್ರಿಯ ಜ್ಞಾನದ್ರವ್ಯ। ಹಾ ಶಿವ ಓಂ ನಮಃಶಿವ ತವ ಚರಣ ನೋಡುವ ಪವಿತ್ರ ಕೊಡು ಧವಳ ಗಂಗಾಧರನೆ॥1॥ ಸತಿನಾಥ ಭೂತ ಪ್ರೀತ ಸತತ ಸದ್ಗುಣ ವ್ರಾತ ಪತಿತ ಪಾವನ ತಾತ ಕ್ರತುವ್ಯೆ ಪದ್ಮಜಾಕಾಂತ। ಕ್ಷಿತಿಯೊಳು ನೀಲಲೋಹಿತ ನೀನೆ ಗುರುವೆಂದು ಸ್ತುತಿಪಗತಿಗೇ ರಘುಪತಿನಾಮ ಎನಗೀಯೊ॥2॥ ತ್ರಯನೇತ್ರ ಚಿತ್ರಗಾತ್ರ ನಮಿಪೆ ಸುರಮಿತ್ರ। ಜಯಜಯಮರ ಸ್ತೋತ್ರ ದಯಮಾಡೋ ಪುಣ್ಯ ಪಾತ್ರ। ಹಾ ಭಯನಿವಾರಣ ಸಿರಿ ವಿಜಯ ವಿಠ್ಠಲನ್ನ। ಭಕುತಿಯಾ ಕೊಡು ಅತಿಶಯದ ಪಿನಾಕೀಶ॥3॥

ಕೈಲಾಸವನೆಂತು ಬಣ್ಣಿಸಲಯ್ಯಾ (ಲಾವಣಿ) — ರಾಗ: ಖರಹರಪ್ರಿಯ

ಕೈಲಾಸವನೆಂತು ಬಣ್ಣಿಸಲಯ್ಯಾ। ಲೀಲಾ ಭಾಗ್ಯದ ಪರ್ವತವಯ್ಯ॥ಪ॥ ಬೆಳ್ಳಿಯ ಬೆಟ್ಟದ ಬೆಡಗನು ನೋಡಿ। ಬೆಳ್ಳಿಯ ಸಿಂಹಾಸನವನ್ನು ನೋಡಿ। ಬೆಳಗುವ ಚಂದ್ರನ ಸೊಬಗನುನೋಡಿ। ಬೆಡಗಿನ ಗರಳ ಕೊರಳನನೋಡಿ॥1॥ ಶಿರದಲಿ ಮೆರೆಯುವ ಗಂಗೆಯ ನೋಡಿ। ಕೊರಳೊಳು ಹರಿಯುವ ಸರ್ಪವ ನೋಡಿ। ಕರದಲ್ಲಿ ಪಿಡಿದಿಹ ಜಪಸರ ನೋಡಿ। ತೊಡೆಯಲಿ ಕುಳಿತಿಹ ಗೌರಿಯ ನೋಡಿ॥2॥ ಫಾಲದಿ ಉರಿಯುವ ನೇತ್ರವ ನೋಡಿ। ಕಾಲಲ್ಲಿ ಕುಣಿಯುವ ನಂದಿಯ ನೋಡಿ। ಮೊರೆ ಹೊಕ್ಕಭಯದ ಹಸ್ತವು ನೋಡಿ। ಮೈಗೆ ಬಳಿದಿಹ ವಿಭೂತಿ ನೋಡಿ॥3॥ ನವಿಲನೇರಿಹ ಷಣ್ಮುಖನ ನೋಡಿ। ಕಡುಬನು ತಿನ್ನುವ ಗಣಪನ ನೋಡಿ। ದೇವನ ಹೊತ್ತಿಹ ಬಸವನ ನೋಡಿ। ದೇವನ ಪಾದಕೆ ವಂದಿಸಿ ಪಾಡಿ॥4॥

ಮಲ್ಲಿಕಾರ್ಜುನನು ನೆಲೆಸಿಹ

ಮಲ್ಲಿಕಾರ್ಜುನನು ನೆಲೆಸಿಹ ಶ್ರೀಶೈಲಗಿರಿಯ ಮಹಿಮೆ। ಮಾನವ ಜನ್ಮವ ಪಾವನಗೈದು ಬೆಳಗುತಿರ್ದೇ ಹಿರಿಮೆ। ಏನಂಬೆ ಗಿರಿಯ ಶ್ರೀಶೈಲ ಗಿರಿಯ ಮಹಿಮೆ॥ಪ॥ ಕೈಲಾಸಾನಾಥಾ ದಾದ್ವಶ ಲಿಂಗದೊಳೊಂದಾಗಿ। ಭವ ಭಕ್ತರನ್ನೇ ಪೊರೆಯೋ ಪಂಚಪೀಠಗಳ ಉತ್ತಮೋತ್ತಮದ ಮೆರೆದನು ಅರುಣಾಸುರನೂ ಬಾಧಿಸಿ ಸುರಗಂಧರ್ವ ಕಿನ್ನರರ ಮೆರೆದನು ಆ ಜಗಕಂಟಕನೂ ಶ್ರೀ ಶೈಲಕ್ಕಿಳಿದು ಬಂದ ಬ್ರಹ್ಮನ ಮೆಚ್ಚಿಸಿ ವರವನು ಪಡೆದು ಗರ್ವದಿ ಹರಿವಿರಂಚಿಗಳೆಲ್ಲರೂ ಕೂಡಿ। ಆದಿ ಮಾಯೆಯ ಬೇಡಿ ದೈನ್ಯದೀ ಲೋಕವು ಪೊರೆಯಲು ಮಾತೆಪಾರ್ವತಿ ಭ್ರಮರರವಾಗಿ ಜವದೇಕ್ರೂರ ಅರುಣನಾ ಗೋಣಮುರಿದು। ಜಗಶಾಂತಿ ತಂದಳೂ ಜಗದಂಬೇ ಶೈಲಗಿರಿಯಲ್ಲಿ॥ ಶಿವನ ಜೊತೆಯಲೀ ನೆಲಸಿದಳೂ ಭ್ರಮರಾಂಬೇ॥ ಇದು ಶೈಲಗಿರಿಯ ಮಹಿಮೆ॥ಪ॥ ಈಶನ ಕಾಣುವ ಕಾತುರದೇ ಭೋರ್ಗರೆಯುತ ಬಂದಳು ಗಂಗಾ ನಾಶದ ಭೀತಿಯು ಲೋಕಕೆ ತಂದಿತು ಭೀಕರ ಪ್ರಳಯ ತರಂಗ ಕ್ಲೇಶವ ನೀಗಿಸೆ ಚಕ್ರದಿ ಗಿರಿಯ। ಭೇದಿಸಿದನು ಶ್ರೀರಂಗಾ ವಸುಧೇ ಬಿರಿದು ತಾ ದಾರಿ ತೋರಲು। ಪಾವನೆ ನೆಲಸಿದಳಾಗ ಇದುವೇ ಪಾತಾಳಗಂಗಾ। ಪೂಜಿಸಿ ಶಿವನಾ ಹರುಷಗೊಂಡನು ಶ್ರೀರಾಮನು ತ್ರೇತಾ ಯುಗದೇ। ಪಾಂಡುನಂದರು ಹರನ ಸೇವಿಸಿ

ಶಾಂತಿಯ ಪಡೆದರು ದ್ವಾಪರದಿ ಪುಣ್ಯದ ಜ್ಯೋತಿಯು ಕಾಂತಿಯ ಬೀರುತ ಮೆರೆಯುತಿದೇ ಯುಗ ಯುಗದಿ ಪಾಪವ ಹರಿಸಿ ಲೋಕದ ಜನರ ಪೊರೆಯುತಿದೇ ಇಹಪರದೀ। ಫಾಲನಯನ ಭ್ರಮರಾಂಬೆ ಗಂಗೆ ವರದೇವರೆಲ್ಲ ನೆಲೆಸಿರುವ ಶ್ರೀಶೈಲವೇ ಕೈಲಾಸಾವೇ ಕೈಲಾಸ ಶ್ರೀಶೈಲ।।ಚ।।

ಶಿವನು ಭಿಕ್ಷಕ್ಕೆ ಬಂದ ನೀಡುಬಾರೇ **ರಾಗ: ಸಿಂಧುಭೈರವಿ**

ಶಿವನು ಭಿಕ್ಷಕ್ಕೆ ಬಂದ ನೀಡು ಬಾರೇ ತಂಗಿ। ಇವನಂಥ ಚೆಲುವರಿಲ್ಲ ನೋಡುಬಾರೆ।।ಪ।। ಒಂದು ಕೈಲಜನ ಕರ್ಪೋಲ ಕಾಣೆ। ಬೆನ್ ಹಿಂದೆ ಕಟ್ಟಿರುವ ತ್ರಿಶೂಲ ಕಾಣೆ। ನಂದಿಯ ಕೋಲು ಪತಾಕಿ ಕಾಣೆ। ಮತ್ ಒಂದು ಪಾದದ ಗೆಜ್ಜೆ ಶಂಭುಕಾಣೆ।।1।। ಅಲ್ಲಿಗಲ್ಲಿಗೆ ಮೃಗದ ಜಲ್ಲಿ ಸಾಲೆ। ಎದೆ ದಲ್ಲಣ ಪಂಚೆ ಶಿಖೆ ಪಾಶ ಕಾಣೆ। ಹುಲ್ಲೆಯಂದದಿ ಹುಸಿಯಲ್ಲ ಕಾಣೆ ಮತ್। ಎಲ್ಲಾ ಪಾದದ ಗೆಜ್ಜೆ ಶಂಭು ಕಾಣೆ।।2।। ಹೆಗಲಲ್ಲಿ ಮಾತಿನರಗಿಣಿಯು ಕಾಣೆ ಕೆಮ್। ಮುಗಿಲಂತೆ ಕಾವಿಯ ವಲ್ಲಿ ಕಾಣೆ। ನಗೆಮುಖ ಮುಂಬಲ್ಲೆಲ್ಲ ಚಿನ್ನ ಕಾಣೆ। ಗೆರೆ ಬರೆದ ವಿಭೂತಿ ಕಪ್ಪು ಗೊರಳ ಕಾಣೆ।।3।। ಮೈಯೆಲ್ಲ ಹಾವಿನ ಮೊತ್ತ ಕಾಣೆ। ಬಲದ ಕೈಯಲ್ಲಿ ಪಿಡಿದ ನಾಗರ ಬೆತ್ತಕಾಣೆ। ವೈಯಾರ ಮೂರು ಲೋಕಕ್ಕರ್ಥ ಕಾಣೆ। ತಕ್ಕ ಥೈಯ್ಯಾ ಥೈಯೆನ್ನೊಂದರ್ಥಿ ಕಾಣೆ।।4।। ಬಾಗಿದ ಬಿಲ್ಲ ಶಿಂಗಡಿ ಕಾಣೆ। ಆತ ತೂಗಿಸಿ ನಡೆವ ನೋಟ ಅಂಬುಕಾಣೆ। ಸೋಗೆಯ ನವಿಲಂತೆ ಕೊರಳು ಕಾಣೆ। ಮೈಯ ಜಗ್ಗಿಸಿ ನಡೆವ ನೋಟ ಚಂದ ಕಾಣೆ।।5।। ನಕ್ಷತ್ರ ಪೂವಿನ ಮಾಲೆ ಕಾಣೆ। ಎಡದ ಕಕ್ಷದೊಳಿಟ್ಟ ಜೋಳಿಗೆ ಕಾಣೆ। ಭಿಕ್ಷುಕನಾಗಿ ಬಂದನಂತೆ ಕಾಣೆ। ರುದ್ರಾಕ್ಷಿಯ ಕೊರಳಲ್ ಧರಿಸ್ಯಾನು ಕಾಣೆ।।6।। ಮನೆ ಮನೆ ದಪ್ಪಲೆ ದಿಮ್ಮಿ ಸಾಲೆ। ಆತ ಹಣವನ್ನು ಕೊಟ್ಟರೊಲ್ಲನಂತೆಕಾಣೆ। ತನಿ ಹಣ್ಣ ನೀಡಬೇಕೆಂತೆ ಕಾಣೆ। ಗೌರೀ ಮನಸ ಬಿಟ್ಟಿರಲಾರನಂತೆ ಕಾಣೆ।।7।। ಅಬ್ಬರಿಸುವ ರುಂಡ ಮಾಲೆ ಕಾಣೆ। ದೊಡ್ ಹೆಬ್ಬುಲಿ ಚರ್ಮದ ಪ್ರಸಿದ್ಧ ಕಾಣೆ। ಒಬ್ಬಳೆ ನೋಡಲಂಜುವೆ ಕಾಣೆ। ದೊಡ್ ಹೆಬ್ಬಾವು ಸುತ್ತಿಹನಂತೆ ಕಾಣೆ।।8।। ಕಣ್ ಹೊತ್ತ ಮೂರು ಕೆಂಡ ಕಾಣೆ। ಸುವರ್ಣದಂಥ ಬೆಟ್ಟ ಶರೀರ ಕಾಣೆ। ಕಳಕಣೆಸುವ ರುಂಡ ಮಾಲೆ ಕಾಣೆ ಮುಂದ್। ಹೊಳೆವೋ ಜಾಗಟೆ ಮುನ್ನೂರು ಕಾಣೆ।।9।। ತೋರಬಾರದ ಹಣ್ಣಂತೆ ಕಾಣೆ। ಫಳಾರಕ್ಕೆ ಆಗಬೇಕೆಂತೆ ಕಾಣೆ। ಆರತಿನೆತ್ತಬೇಕಂತೆ ಕಾಣೆ ಉಪಚಾರಂಗಳ ಮಾಡಬೇಕಂತೆ ಕಾಣೆ ।।10।। ಕಟ್ಟಾಣೆ ಮುತ್ತಿನ ಕಂತೆ ಕಾಣೆ। ಅಳ। ವಟ್ಟ ಯೌವನದ ರೂಪು ಕಾಣೆ। ಬಿಟ್ಟ ಕೆಂಜೆಡೆ ಕೆಮ್ಮೀಸೆ ಕಾಣೆ। ಆತ ಕೊಟ್ಟ ನಂಬಿಗೆ ಸ್ಥಿರವಂತೆ ಕಾಣೆ।।11।। ಗುರುಹಿರಿಯರುಗಳ ಒಡೆಯ ಕಾಣೆ ಸಿರಿಯ ಕರದು ಕರದು ಈವನಂತೆ ಕಾಣೆ। ಕರುಣಾ ಸಾಗರ ಮಹದೇವ ಕಾಣೆ। ನಮ್ಮ ಗುರುಮೂರ್ತಿ ನಂಜುಂಡಲಿಂಗ ಕಾಣೆ।।12।।

ಶಿವಲಿಂಗ ಪೂಜೆಯ ಶಿವರಾತ್ರಿ ದಿನದಲಿ **ರಾಗ: ಆನಂದಭೈರವಿ-ಆದಿತಾಳ**

ಶಿವಲಿಂಗ ಪೂಜೆಯ ಶಿವರಾತ್ರಿ ದಿನದಲಿ। ಶ್ರದ್ಧೆಯಿಂಮಾಡಲು ಶಾಂತಿಯು ದೊರಕುವುದೋ ...।।ಪ।। ಗಿರಿಜಾ ರಮಣನ ಗಂಗಾಧರ ಹರನ। ಹಾಲು ಸಕ್ಕರೆ ತುಪ್ಪ ಹಣ್ಣುಗಳ ಸೇರಿಸಿ। ಜೇನುತುಪ್ಪ ಬೆರೆಸುತ ಅಭಿಷೇಕವ ಮಾಡಿ। ಏಲಕ್ಕಿ ಕೇಸರಿ ಬೆರೆಸಿದ ಗಂಗೆಯಿಂ।।1।। ಶುಭ್ರವಸ್ತ್ರದಿ ಶಿವನನು ಒರೆಸುತ। ಮೂರುಪಟ್ಟೆಯಲಿ ವಿಭೂತಿ ಹಚ್ಚಿ। ಗಂಧವ ಪೂಸಿ ಕುಂಕುಮವನಿಟ್ಟು। ಬಿಲ್ ಪತ್ರೆ ತುಂಬೆಯ ಸುಮವನರ್ಚಿಸಿ।।2।। ಶಿವನಾಮ ಪಾಡುತ ಪರವಶಳಾಗಿ। ಪಕ್ವವಾದ ನೈವೇದ್ಯ ಶಿವನಿಗರ್ಪಿಸಿ। ದೀಪ ಧೂಪದಿಂ ಕರ್ಪೂರದಾರತಿಯ ಮಾಡಿ। ಲಿಂಗಕೆ ಭಕ್ತಿಲಿ ನಮಿಸುತ।।3।। ಭಕ್ತಿ ಭಾವದೊಳು ವರವನು ಬೇಡುತ। ಭವಸಾಗರದಿಂದ ಬಿಡಿಸೆಂದು ಕೇಳುತ। ಶಾರದದಾಸಿ ವಂದಿತ ಶಂಕರನ। ಪಾಡಿಕೊಂಡಾಡಲು ಪ್ರೇಮದಿ ಸಲಹುವ।।4।।

ನೀಲಕಂಠ ಚಂದ್ರಮೌಳಿ **ರಾಗ: ಕಾಮವರ್ಧಿನಿ**

ನೀಲಕಂಠ ಚಂದ್ರಮೌಳಿ। ಭಸ್ಮ ಚರ್ಚಿತ ಶಂಕರ। ಹೇ ಗಿರೀಶ ಶೂಲಪಾಣಿ। ಪಾರ್ವತಿ ಪರಮೇಶ್ವರಾ।।1।। ಋಷಭವಾಹನ ಸರ್ಪಭೂಷಣ। ವ್ಯಾಘ್ರಚರ್ಮಾಂಬರಧರ। ಶೂಲಹಸ್ತ ಪಿನಾಕಪಾಣಿ। ತ್ರಿಲೋಕವಂದ್ಯ ದಿಗಂಬರ।।2।। ಫಾಲನೇತ್ರ ಕಪಾಲಮಾಲಾ। ಕರಾಳ ವಿಷಕಂಠೇಶ್ವರ। ಲೋಲ ಗಿರಿಜ ಬಾಲ। ಭಕ್ತಾಭೀಷ್ಟಪ್ರದ ಗೌರೀಶ್ವರ।।3।।

ಪಾಹಿ ಪದ್ಮ ಬಂಧುನೇತ್ರ

ಪಾಹಿ ಪದ್ಮ ಬಂಧುನೇತ್ರ। ಪಾರ್ವತೀ ಪತೇ ಹರಾ। ಪಾಹಿ ಭವ್ಯದಾಯಕಾ। ಪರಿಪಾಲಯಾಶು ಶಂಕರಾ।।1।। ಶರಣರಕ್ಷ ಯಜ್ಞಧ್ವಂಸ। ಶಂಭವೇ ಜಟಾಧರಾ। ನಿರುತ ನೃತ್ಯಲೋಲ ತ್ರಿಪುರ-। ವೈರಿ ಭೋ ದಿಗಂಬರಾ।।2।। ಸಾರಸಾಕ್ಷ ಭಕ್ತಪಾಲ। ಭಾರ್ಗವೀ ಮನೋಹರ। ದಾನವೇಂದ್ರ ನಾಶಕಾ ಪರಿ-। ಪಾಹಿ ಶಿವಾಶಂಕರಾ।।3।। ಬೋಗಿಶಯನ ವಾಸವಾದಿ ದೇವವೃಂದ ವಂದಿತಾ। ರಾಗರಹಿತ ಭೋಗ ಮಹಿತ। ಮುನಿಜನಾದಿ ವಂದಿತಾ।।4।। ದುಷ್ಟ ಶಿಕ್ಷ ಶಿಷ್ಟ ರಕ್ಷ। ಪೂಜಿತತ್ರಿ ವಿಷ್ಟಪ। ನಷ್ಟದೋಷ ಭವ್ಯವೇಷ। ಸೇವಿತೇಷ್ಟದಾಯಕ।।5।। ಮಾರವೈರಿ ನಂದಿವಾಹ। ವಾರಣ ದಿಂಗಬರಾ। ನೀರಾದಾಭ ಸುಂದರ ತನು। ಚಾರು ಚಂದ್ರಶೇಖರಾ।।6।।

ಜಂಗಮರು ನಾವು ನೀವೇ ಕೇಳಿ

ಜಂಗಮರು ನಾವು। ನೀವೇ ಕೇಳಿ।।ಪ।। ಜಂಗಮರು ನಾವು ಲಿಂಗಾಂಗಿಗಳು। ಮಂಗಳವಂತರ। ಭವಿಗಳೆಂಬಿರಿ ಬರಿದೆ।।ಅ.ಪ.।। ಶಿವಗುರುದೈವ ಕೇಶವ ನಮ್ಮ ಮನೆದೈವ। ವರದ ಮೋಹನ ನಮ್ಮ ಗುರುಶಾಂತೇಶ। ಶಿವ ಗುರುದ್ರೋಹಮಾಡಿದ ಪರವಾದಿಗೆ। ರವರವ ನರಕದೊಳುರುಳುವದೇ ಗತಿ।।1।। ವಿಭೂತಿ ನಮಗುಂಟು। ವಿಶ್ವೇಶ ನಮಗುಂಟು। ಶೋಭನ ಮುದ್ರೆಯು ನಮಗುಂಟು। ಶ್ರೀ ಭಾಗೀರಥಿ ಅಗ್ನಿಮಜ್ಜನ ನಮಗುಂಟು। ಸೌಭಾಗ್ಯವೀವ ಮಹತಿನ ಮಠದವರು।। 2।। ವಿರಕ್ತರು ನಾವು। ಶೀಲವಂತರುನಾವು। ವೀರಭದ್ರನ ಪ್ರಿಯ ಪ್ರಿಯ ರಾವು। ಕಾರಣಕರ್ತ ಶ್ರೀ ಪುರಂದರವಿಠಲನ। ಕಾರುಣ್ಯಕೆ ಮುಖ್ಯಪಾತ್ರರುನಾವು।।3।।

ಅಮ್ಮ ಗುಮ್ಮ ಬಂದಿಹ

ಅಮ್ಮ ಗುಮ್ಮ ಬಂದಿಹ ಬಾಗಿಲ ಮುಚ್ಚಿ। ಅಮ್ಮ ಅಂಜಿಪ ಅದ್ಭುತ ರೂಪನು ದಮ್ಮಯ್ಯ ಎಂಬೆನು ಆತನ ಕಳುಹೆ।।ಪ।। ಗೂಳಿಯನೇರಿ ಬಂದಿಹನಮ್ಮ। ಗಜಚರ್ಮವ ಹೊದ್ದು ಶೂಲವ ಕೈಯಲ್ಲಿ ಪಿಡಿದಿಹನಮ್ಮ। ಕಾಲ ಚಕ್ರವು ಕೊರಳೊಳಗಮ್ಮ। ಫಾಲದಿ ಕೆಂಡವ ಸುರಿಸುವ ನಮ್ಮ।।1।। ಉರಿ ಮುಖ ಗಡ್ಡ ಕೆಂಜೆಡೆಗಳು ಕೈಯಲ್ಲಿ ನೋಡೆ। ಹಿಡಿದ ಬ್ರಹ್ಮನ ಶಿರದ ಹೋಳು। ಕಡಿದ ತಲೆಗಳು ಕೊರಳೊಳಗಮ್ಮ। ಬಳಿದ ವಿಭೂತಿಯರೂಪ ನೋಡಮ್ಮ ।।2।। ಮೂರು ರೂಪದವನಿವನಮ್ಮ ಕಣ್ಣಲ್ಲಿ ನೋಡೆ ಮೂರು ಲೋಕವ ಸುಡುವನಮ್ಮ। ಮಾರಜನಕ ನಮ್ಮ ವಿಜಯವಿಠ್ಠಲನ। ಊರೂರು ಅಲೆಯುತ ಹುಡುಕುವನಮ್ಮ।।3।।

ಕೈಲಾಸವಾಸ ಗಂಗಾಧರ

ಕೈಲಾಸವಾಸ ಗಂಗಾಧರ। ಆನಂದ ತಾಂಡವ ಸದಾಶಿವ।। ಹಿಮಗಿರಿವಾಸ ಸಾಂಬಶಿವ। ಗಣಪತಿ ಸೇವಿತ ಹೇ ಜಗದೀಶ।। ಶರವಣ ಸೇವಿತ ಹೇ ಪರಮೇಶ ಶೈಲಗೀರಿಶ್ವರ ಉಮಾಮಹೇಶ್ವರ ದೀನಲೋಚನ ನಟೇಶ।।

ಹರ ಹರ ಹರ ಮಹದೇವ (ಹಿಂದಿ) ರಾಗ: ಪುನ್ನಾಗವರಾಳಿ

ಹರ ಹರ ಹರ ಮಹದೇವ ಶಂಭೋ ಶಂಕರ।।ಪ।। ಆದಿ ಅನಂತ ಅನಾಮಯ ಅಖಿಲ ಕಲಾಧಾರಿ। ಅಮಲ ಅರೂಪ ಅಗೋಚರ ಅವಿಚಲ ಅಧಿಹಾರಿ। ಬ್ರಹ್ಮ, ವಿಷ್ಣು, ಮಹೇಶ್ವರ ತುಮ್ ತ್ರಿಮೂರ್ತಿ ಧಾರಿ। ಕತೃ, ಭತೃ, ಧತೃ, ತುಮುಹಿ ಸಂಹಾರಿ।।1।। ರಕ್ಷಕ, ಭಕ್ಷಕ, ಪ್ರೇರಕ ತುಮ್ ಔಡರದಾನಿ। ಸಾಕ್ಷಿ, ಪರಮ ಕತೃ ಕತೃ ಅಭಿಮಾನಿ। ಜಾಲಕ, ಪಾಲಕ, ರಲಗಲ ರುಂಡ ಮಾಲಧಾರಿ। ಚಿತಾ ಭಸ್ಮ ತ್ರಿನಯನ ನಯನ ಮಹಾಕಾಳಿ।।2।। ನಿರ್ಗುಣ, ಸಗುಣ, ನಿರಂಜನ ಜಗಮಯ ನಿತ್ಯ ಪ್ರಭೋ। ಕಾಲಾರೂಪ, ಕೇವಲ ಕಾಲಾತೀತ ಪ್ರಭೋ। ಸಚ್ಚಿದಾನಂದ ರಸಮಯ ಕರುಣಾಮಯದಾತ। ಪ್ರೇಮ ಸುಧಾನಿಧಿ ಪ್ರಿಯತಮ ಅಖಿಲ ವಿಶ್ವತ್ರಾತ।।3।।

ಓಂ ನಮಃ ಶಿವಾಯ **ರಾಗ: ಕಲ್ಯಾಣಿ**

ಓಂ ನಮಃ ಶಿವಾಯ। ಓಂ ನಮಃ ಶಿವಾಯ। ಓಂ ನಮಃ ಶಿವಾಯ। ಓಂ ನಮಃ ಶಿವಾಯ। ಒಂದು ದಳದ ಪದ್ಮದಲ್ಲಿ ಉದಯವಾದ ಲಿಂಗವೇ। ಆತ್ಮ ಜ್ಯೋತಿ ಲಿಂಗವೇ ಜ್ಞಾನ ಜ್ಯೋತಿ ಲಿಂಗವೇ॥1॥ ಎರಡು ದಳದ ಕಮಲದಲ್ಲಿ ಎದ್ದು ಬಂದ ಲಿಂಗವೇ। ಆತ್ಮ ಜ್ಯೋತಿ ಲಿಂಗವೇ ಜ್ಞಾನ ಜ್ಯೋತಿ ಲಿಂಗವೇ॥2॥ ಮೂರು ದಳದ ಕಮಲದಲ್ಲಿ ಮೂಡಿ ಬಂದ ಲಿಂಗವೇ। ಆತ್ಮ ಜ್ಯೋತಿ ಲಿಂಗವೇ ಜ್ಞಾನ ಜ್ಯೋತಿ ಲಿಂಗವೇ॥3॥ ನಾಲ್ಕು ದಳದ ಕಮಲದಲ್ಲಿ ನಲಿದು ಬಂದ ಲಿಂಗವೇ। ಆತ್ಮ ಜ್ಯೋತಿ ಲಿಂಗವೇ ಜ್ಞಾನ ಜ್ಯೋತಿ ಲಿಂಗವೇ॥4॥ ಐದು ದಳದ ಕಮಲದಲ್ಲಿ ಐಕ್ಯವಾದ ಲಿಂಗವೇ। ಆತ್ಮ ಜ್ಯೋತಿ ಲಿಂಗವೇ ಜ್ಞಾನ ಜ್ಯೋತಿ ಲಿಂಗವೇ॥5॥ ಆರು ದಳದ ಕಮಲದಲ್ಲಿ ಅರಳಿ ಬಂದ ಲಿಂಗವೇ। ಆತ್ಮ ಜ್ಯೋತಿ ಲಿಂಗವೇ ಜ್ಞಾನ ಜ್ಯೋತಿ ಲಿಂಗವೇ॥6॥ ಏಳು ದಳದ ಕಮಲದಲ್ಲಿ ಏರಿ ಬಂದ ಲಿಂಗವೇ। ಆತ್ಮ ಜ್ಯೋತಿ ಲಿಂಗವೇ ಜ್ಞಾನ ಜ್ಯೋತಿ ಲಿಂಗವೇ॥7॥ ಎಂಟು ದಳದ ಕಮಲದಲ್ಲಿ ಅಷ್ಟಮುಖದ ಲಿಂಗವೇ। ಆತ್ಮ ಜ್ಯೋತಿ ಲಿಂಗವೇ ಜ್ಞಾನ ಜ್ಯೋತಿ ಲಿಂಗವೇ॥8॥ ಒಂಬತ್ತು ದಳದ ಕಮಲದಲ್ಲಿ ಒಲಿದು ಬಂದ ಲಿಂಗವೇ। ಆತ್ಮ ಜ್ಯೋತಿ ಲಿಂಗವೇ ಜ್ಞಾನ ಜ್ಯೋತಿ ಲಿಂಗವೇ॥9॥ ಹತ್ತು ದಳದ ಕಮಲದಲ್ಲಿ ಹಾರಿಬಂದ ಲಿಂಗವೇ। ಹರನ ರೂಪ ಲಿಂಗವೇ ಹವಳದಂಥ ಲಿಂಗವೇ॥11॥

ಜೈ ಜೈ ಶಂಕರನೇ **ರಾಗ: ಕುರಂಜಿ**

ಜೈ ಜೈ ಶಂಕರನೇ ಜೈ ಶಂಕರನೇ ಜೈ ಶಂಕರನೇ। ದುಃಖೀಜನರ ದುಃಖ ದೂರಮಾಡುವ ಜೈ ಜೈ ಶಂಕರನೇ॥ಪ॥ ಅಲ್ಲಿಯು ಶಿವನೆ ಇಲ್ಲಿಯು ಶಿವನೆ। ಎಲ್ಲೆಲ್ಲಿಯು ತಾ ತುಂಬಿಹನು। ಭಾವಿಸಿ ಕರೆದೊಡೆ ಓಡೋಡಿ ಬರುವ ಜೈ ಜೈ ಶಂಕರನೆ॥1॥ ಹಗಲಿರುಳೆನ್ನದೆ ಸ್ತುತಿಸಿನಿನ್ನನು ಎಳೆಗರುವಂದದಿ ಬಳಲಿದೆ ನಾನು। ಅಂಬಾಪತಿಯೆ ಚಂದ್ರಶೇಖರ ಜೈ ಜೈ ಶಂಕರನೆ॥2॥ ಮಾಯಾ ಪಾಶದ ಮೋಹಕೆ ಸಿಲುಕಿ। ಅನಿತ್ಯವಾದುದ ನಿಜವೆಂದು ನಂಬಿದೆ। ಎನ್ನ ಅಜ್ಞಾನವನು ದೂರ ಮಾಡುಜೈ ಜೈ ಶಂಕರನೇ॥3॥

ನಮಃ ಶಿವಾಯ (ಹಿಂದಿ) **ರಾಗ: ಸಿಂಧುಭೈರವಿ**

ನಮಃ ಶಿವಾಯ ನಮಃ ಶಿವಾಯ ನಾಮ್ ರಠೋರೆ। ನಮಃ ಶಿವಾಯ ನಮಃ ಶಿವಾಯ ನಾಮ ಜಪೋರೆ॥ಪ॥ ನಮಃ ಶಿವಾಯ ನಮಃ ಶಿವಾಯ ಕೀರ್ತನ್ ಕರೋರೆ। ನಮಃ ಶಿವಾಯ ನಮಃ ಶಿವಾಯ ನರ್ತನ್ ಕರೋರೆ॥1॥ ನಮಃ ಶಿವಾಯ ನಮಃ ಶಿವಾಯ ಧ್ಯಾನ್ ಕರೋರೆ। ನಮಃ ಶಿವಾಯ ನಮಃ ಶಿವಾಯ ಮನನ್ ಕರೋರೆ॥2॥ ನಮಃ ಶಿವಾಯ ನಮಃ ಶಿವಾಯ ವಂದನ್ ಕರೋರೆ। ನಮಃ ಶಿವಾಯ ನಮಃ ಶಿವಾಯ ಆರತಿ ಕರೋರೆ॥3॥ ನಮಃ ಶಿವಾಯ ನಮಃ ಶಿವಾಯ ಅಭಿಷೇಕ ಕರೋರೆ। ನಮಃ ಶಿವಾಯ ನಮಃ ಶಿವಾಯ ಅರ್ಚನ್ ಕರೋರೆ॥4॥ ನಮಃ ಶಿವಾಯ ನಮಃ ಶಿವಾಯ ಭಜನ್ ಕರೋರೆ। ನಮಃ ಶಿವಾಯ ನಮಃ ಶಿವಾಯ ಚಿಂತನ್ ಕರೋರೆ॥5॥

ಭಂ ಭಂ ಭೋಲಾ (ಹಿಂದಿ) **ರಾಗ: ಪುನ್ನಾಗವರಾಳಿ**

ಭಂ ಭಂ ಭೋಲಾ (7ಸಾರಿ) ರೇ। ನೀಲಕಂಠ (7ಸಾರಿ) ರೇ। ನಟರಾಜ (7ಸಾರಿ) ರೇ। ನರ್ತನಶೀಲ (7ಸಾರಿ) ರೇ। ಮೃತ್ಯುಂಜಯ (7ಸಾರಿ) ರೇ। ಗಂಗಾಧರ (7ಸಾರಿ) ರೇ। ಸರ್ಪಭೂಷಣ (7ಸಾರಿ) ರೇ। ವ್ಯಾಘ್ರಚರ್ಮಾಂಬರ (7ಸಾರಿ) ರೇ। ನಂದಿವಾಹನ (7ಸಾರಿ) ರೇ। ಪಾರ್ವತಿ ರಮಣ (7ಸಾರಿ) ರೇ। ಶಶಿಶೇಖರ (7ಸಾರಿ) ರೇ। ಫಾಲನೇತ್ರ (7ಸಾರಿ) ರೇ। ಭೂತನಾಥ (7ಸಾರಿ) ರೇ। ಶೂಲಪಾಣಿ (7ಸಾರಿ) ರೇ। ದಿಗಂಬರ (7ಸಾರಿ) ರೇ। ನಾದಲೋಲ (7ಸಾರಿ) ರೇ। ಭಸ್ಮಭೂಷಿತ (7ಸಾರಿ) ರೇ॥

ಶ್ರೀಕಂಠ ವಿಷಕಂಠ

